2017 ಕ.ತೀ.ವ 1293

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

ಶ್ರೀಮತಿ ಶಿಲ್ಪ –ವಿರುದ್ಧ– ಪ್ರವೀಣ್ ಎಸ್.ಆರ್*

ಕೌಟುಂಬಿಕ ನ್ಯಾಯಾಲಯ ಅಧಿನಿಯಮ, 1984ರ 19(1)ನೇ ಪ್ರಕರಣದಡಿಯಲ್ಲಿ ಅಪೀಲನ್ನು ಸಲ್ಲಿಸಲಾಗಿದೆ.

ಹಿಂದೂ ವಿವಾಹ ಅಧಿನಿಯಮ – 13ನೇ ಪ್ರಕರಣ

ಕೌಟುಂಬಿಕ ನ್ಯಾಯಾಲಯದ ಮಾನ್ಯ ಪ್ರಧಾನ ನ್ಯಾಯಾಧೀಶರು ನೀಡಿದ ವಿಚ್ಛೇದನ ಡಿಕ್ರಿಯಿಂದ ಬಾಧಿತರಾದ ಅಪೀಲುದಾರರು ಈ ಅಪೀಲನ್ನು ಹೂಡಿರುತ್ತಾರೆ.

ಕೌಟುಂಬಿಕ ನ್ಯಾಯಾಲಯವು ಮಾನಸಿಕ ಕ್ರೌರ್ಯ ಮತ್ತು ವಾಸಿಯಾಗದ ಮಾನಸಿಕ ಅಸ್ವಸ್ಥತೆಯಿಂದ ಎದುರುದಾರಳು ಬಳಲುತ್ತಿರುವಳೆಂಬ ಎರಡೂ ದಸ್ತಾವೇಜೀಯ ಸಾಕ್ಷ್ಯದ ಮೇಲೆ ಅರ್ಜಿಯನ್ನು ಪುರಸ್ಕರಿಸಿತ್ತು.

ಅಧೀನ ನ್ಯಾಯಾಲಯವು, ಸಂಪೂರ್ಣವಾಗಿ ವಾಸಿಮಾಡಲಾಗದ ಪ್ಯಾರಾನಾಯ್ಡ್ ಶಿಜೊಫ್ರೇನಿಯಾದಿಂದ ಬಳಲುತ್ತಿರುವಳೆಂದು ಹಣೆಪಟ್ಟಿ ಕಟ್ಟುವಷ್ಟು ಅಸೂಕ್ಷ್ಮವಾಗಿದೆ. ಕೌಟುಂಬಿಕ ನ್ಯಾಯಾಲಯವು, ಇದೇ ವೈದ್ಯಕೀಯ ಸಾಕ್ಷ್ಯದ ಮೇಲೆ ಇದೇ ಸಮಯದಲ್ಲಿ ನಿಯತ ವೈದ್ಯಕೀಯ ಔಷಧ ಮತ್ತು ಕುಟುಂಬದ ಬೆಂಬಲದೊಂದಿಗೆ ಅಂಥ ರೋಗಿಗಳು ಸಾಮಾನ್ಯ ಜೀವನವನ್ನು ನಡೆಸಬಹುದೆನ್ನುವ ಇಂಗಿತವನ್ನು ಸೂಚಿಸಬಹುದಾಗಿತ್ತು. ಸಮಾಜದ ಇತರ ಯಾವುದೇ ಸಾಮಾನ್ಯ ವ್ಯಕ್ತಿಗಳಂತೆ ನಿಯತ

*ಎಂ.ಎಫ್.ಎ. ಸಂ. 103381/2014 (ಎಫ್‌ಸಿ), ದಿನಾಂಕ: 20ನೇ ಜುಲೈ, 2016.

ವೈದ್ಯಕೀಯ ಔಷಧದ ಬೆಂಬಲದಿಂದ ಜೀವನ ನಡೆಸುವಂಥ ನಮ್ಮ ಸಮಾಜದಲ್ಲಿ ಅಂಥ ಕಾಯಿಲೆಯ ಹಲವಾರು ಸಂತ್ರಸ್ತರ ಜೀವಂತ ಉದಾಹರಣೆಗಳಿವೆ. ಪ್ರಸ್ತುತ ಈ ನ್ಯಾಯಾಲಯದ ಮುಂದಿರುವ ಅಪೀಲುದಾರ / ಪತ್ನಿಯು ನ್ಯಾಯಾಲಯ ಸಭಾಂಗಣದಲ್ಲಿ ಹಾಜರಾಗಿರುವ ಯಾರೇ ಇತರ ವ್ಯಕ್ತಿಯಂತೆ ಕಾಣುತ್ತಿದ್ದು, ಇವಳು ಎಂಸಿಎ ಪದವಿಯನ್ನು ಡಿಸ್ಟಿಂಕ್ಷನ್‌ನಲ್ಲಿ 1ನೇ ದರ್ಜೆಯಲ್ಲಿ ಪಡೆದುಕೊಂಡಿದ್ದು, ನ್ಯಾಯಸ್ಥಾನದಲ್ಲಿ ಇದನ್ನು ಸಲ್ಲಿಸಲಾಗಿದ್ದು, ಶಿಜೊಫ್ರೇನಿಕ್ ರೋಗಲಕ್ಷಣಗಳು ಪುನರಾವರ್ತಿಸುವ ಯಾವುದೇ ಗ್ರಹಿಕೆಗಳಿದ್ದರೂ ಕೂಡ ಅವಳ ವಿವಾಹಕ್ಕು ಮೊದಲು ಉದ್ಯೋಗದಲ್ಲಿದ್ದು, ಉತ್ತರವು ಔಷಧವನ್ನು ಹೊಸರೂಪದಲ್ಲಿ ಕೊಡುವುದರಲ್ಲಿದೆ, ಆದರೆ ಅವಳ ವೈವಾಹಿಕ / ಭಾವನಾತ್ಮಕ ಜೀವನವನ್ನೇ ಚಿವುಟಿ ಹಾಕುವುದರಲ್ಲಲ್ಲ.

ಅಗತ್ಯಪಡಿಸಿದ ಅಧಿನಿಯಮದ ಉಲ್ಲೇಖವನ್ನು ಈ ಮುಂದಿನಂತೆ ನೀಡಲಾಗಿದೆ.

"13 ವಿಚ್ಛೇದನ.– (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ಯಾವುದೇ ವಿವಾಹವನ್ನು ಗಂಡನು ಅಥವಾ ಹೆಂಡತಿಯು ಸಲ್ಲಿಸಿದ ಅರ್ಜಿಯ ಮೇಲೆ, ವಿವಾಹದ ಇತರ ಪಕ್ಷಕಾರನು/ಳು,–

(i) ವಿವಾಹವು ಅನುಷ್ಠಾಪಿತವಾದ ತರುವಾಯ, ತನ್ನ ಹೆಂಡತಿ ಅಥವಾ ಗಂಡನಲ್ಲದ ಅನ್ಯ ವ್ಯಕ್ತಿಯೊಂದಿಗೆ ಸ್ವಯಿಚ್ಛೆಯಿಂದ ಲೈಂಗಿಕ ಸಂಭೋಗ ಮಾಡಿರುವ; ಅಥವಾ

(ii) ವಿವಾಹವು ಅನುಷ್ಠಾಪಿತವಾದ ತರುವಾಯ, ಅರ್ಜಿದಾರನೊಡನೆ/ಳೊಡನೆ ಕ್ರೂರವಾಗಿ ವರ್ತಿಸುವ; ಅಥವಾ

(iii) ಅರ್ಜಿಯನ್ನು ಸಲ್ಲಿಸಿದ ನಿಕಟಪೂರ್ವದ ಎರಡು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಕಾಲ ನಿರಂತರವಾಗಿ ಅರ್ಜಿದಾರನನ್ನು/ಳನ್ನು ತ್ಯಜಿಸಿರುವ; ಅಥವಾ

(iv) ಮತಾಂತರದಿಂದ ಹಿಂದೂ ಆಗಿರುವುದು ಕೊನೆಗೊಂಡಿರುವ; ಅಥವಾ

(v) ಗುಣಪಡಿಸಲಾಗದ ಅಸ್ವಸ್ಥ ಚಿತ್ತದಿಂದಿರುವ, ಅಥವಾ ಅರ್ಜಿದಾರನು/ಳು ಪ್ರತಿ ಅರ್ಜಿದಾರನೊಂದಿಗೆ/ಳೊಂದಿಗೆ ಜೀವನ ನಡೆಸಬಹುದೆಂದು ನಿರೀಕ್ಷಿಸಲಾಗದಂಥ ರೀತಿಯ ಮತ್ತು ಅಷ್ಟರಮಟ್ಟಿಗಿನ ಮಾನಸಿಕ ಅಸ್ತವ್ಯಸ್ತತೆಯಿಂದ ನಿರಂತರವಾಗಿ ಅಥವಾ ಆಗಾಗ್ಗೆ ಬಳಲುತ್ತಿರುವ;

ವಿವರಣೆ.– ಈ ಖಂಡದಲ್ಲಿ,–

(ಎ) ''ಮಾನಸಿಕ ಅಸ್ತವ್ಯಸ್ತತೆ'' ಎಂದರೆ, ಮಾನಸಿಕ ಅನಾರೋಗ್ಯ, ಮನಸ್ಸಿನ ನಿಧಾನ ಬೆಳವಣಿಗೆ ಅಥವಾ ಅಪೂರ್ಣ ಬೆಳವಣಿಗೆ, ಅಸ್ಥಿಮಿತ ಬುದ್ಧಿ ಅಥವಾ ಮನಸ್ಸಿನ ಇತರ ಯಾವುದೇ ಅಸ್ತವ್ಯಸ್ತತೆ ಅಥವಾ ದೌರ್ಬಲ್ಯ ಮತ್ತು ಇದು ಮತಿಭ್ರಮಣೆಯನ್ನು ಒಳಗೊಳ್ಳುತ್ತದೆ;

(ಬಿ) ''ಅಸ್ಥಿಮಿತ ಬುದ್ಧಿ'' ಎಂದರೆ, (ಸಾಮಾನ್ಯ ಮಟ್ಟಕ್ಕಿಂತ ಕಡಿಮೆ ಬುದ್ಧಿಯನ್ನು ಒಳಗೊಂಡಿರಲಿ ಇಲ್ಲದಿರಲಿ) ಇತರ ಪಕ್ಷವು ಅಸಾಮಾನ್ಯವಾಗಿ ಆಕ್ರಮಣಕಾರಿ ಅಥವಾ ತೀವ್ರ ಹೊಣೆಗೇಡಿಯಾಗುವಂತೆ ಮಾಡುವ ಮತ್ತು ವೈದ್ಯಕೀಯ ಚಿಕಿತ್ಸೆಯು ಅವಶ್ಯಕತೆಯಿರುವ ಅಥವಾ ಇಲ್ಲದಿರುವ ಅಥವಾ ವೈದ್ಯಕೀಯ ಚಿಕಿತ್ಸೆಗೆ ಒಳಪಡುವ ಅಥವಾ ಒಳಪಡದಿರುವ ಮನಸ್ಸಿನ ನಿರಂತರ ಅಸ್ತವ್ಯಸ್ತತೆಯನ್ನು ಅಥವಾ ದೌರ್ಬಲ್ಯವನ್ನು ಒಳಗೊಳ್ಳುತ್ತದೆ; ಅಥವಾ

ಹಾಗಾಗಿ ವಿಚ್ಛೇದನಕ್ಕಾಗಿನ ಆಧಾರವನ್ನು ನಿರೂಪಿಸಲು ಎರಡು ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆಂದು ಶಾಸನವು ತಿಳಿಸುತ್ತದೆ:– (ಎ) ವಾಸಿಪಡಿಸಲಾಗದ ಅನಾರೋಗ್ಯ ಮನಃಸ್ಥಿತಿ (ಪ್ರಸ್ತುತ ಪ್ರಕರಣದಲ್ಲಿ, ಶಿಜೊಫ್ರೇನಿಯಾ) ಮತ್ತು (ಬಿ) ಅರ್ಜಿದಾರನು ಅವಳೊಂದಿಗೆ ಬದುಕುವುದನ್ನು ಯುಕ್ತವಾಗಿ ಊಹಿಸಲೂ ಸಾಧ್ಯವಾಗದಿರುವಷ್ಟು ಮಟ್ಟಿಗೆ ಇರುವಿಕೆ. ನ್ಯಾಯಾಲಯಕ್ಕೆ ತಂದಿರುವ ಈ ಪ್ರಕರಣದಲ್ಲಿ ಈ ಎರಡೂ ಸಂಗತಿಗಳು ಕಾಣೆಯಾಗಿವೆ. ಅವಳ ಶಿಜೊಫ್ರೇನಿಯಾ ಸ್ಥಿತಿಯು, ಉಪಶಮನದಲ್ಲಿಡುವಂಥದ್ದಾಗಿದೆ. ಸಂಬಂಧ ಬೆಳೆಸಿಕೊಳ್ಳುವಲ್ಲಿ ಮತ್ತು ಒಂದಾಗಲು, ಉಸಿರಾಡುವುದಕ್ಕೂ ಸಮಯ ನೀಡದೆ, ಪತಿಯು ಆತುರಾತುರವಾಗಿ ನ್ಯಾಯಾಲಯದ ಮೆಟ್ಟಿಲೇರಿರುತ್ತಾರೆ.

**ವಾಸಿ ಮಾಡಲಾಗದ ಶಿಜೊಫ್ರೇನಿಯಾ ನಮೂನೆಯ ಅಸ್ವಸ್ಥತೆಯಿಂದ ಬಳಲುತ್ತಿರುವುದನ್ನು ಅಧಿನಿಯಮದ 13(1)(iii)ನೇ ಪ್ರಕರಣದ ಮೇರೆಗೆ ಮೊಕದ್ದಮೆಯನ್ನು ರೂಪಿಸಲು ಪತಿಯು ವಿಫಲನಾಗಿರುವನೆಂದು ತೀರ್ಮಾನಿಸಿ, ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ವೈವಾಹಿಕ ಪ್ರಕರಣ ಸಂ.221/2013ರಲ್ಲಿ ಹೊರಡಿಸಲಾದ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿಹಾಕಲಾಗಿದೆ. ಅಪೀಲನ್ನು ಪುರಸ್ಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2014) 1 ಎಸ್‌ಸಿಸಿ 225*
*ಕೊಲ್ಲಮ್ ಚಂದ್ರ ಶೇಖರ್ –ವಿರುದ್ಧ–*
*ಕೊಲ್ಲಮ್ ಪದ್ಮ ಲತಾ* *(ಉಲ್ಲೇ) 6*

*2. (2011) 12 ಎಸ್‌ಸಿಸಿ 1*
*ಪಂಕಜ್ ಮಹಾಜನ್ –ವಿರುದ್ಧ–*
*ಡಿಂಪಲ್ ಅಲಿಯಾಸ್ ಕಾಜಲ್* *(ಉಲ್ಲೇ) 7*

*3. ಎಂಎಫ್‌ಎ ಸಂಖ್ಯೆ. 8062/2004 ಡಿ.ಡಿ. 11.09.2009*
*ರವಿಕುಮಾರ್ –ವಿರುದ್ಧ– ಹೇಮಾ ದೇಶ್‌ಪಾಂಡೆ* *(ಉಲ್ಲೇ) 7*

*4. ಎಐಆರ್ 1975 ಎಸ್‌ಸಿ 1534*
*ನಾರಾಯಣ್ ಗಣೇಶ್ ದಸ್ತಾನೆ –ವಿರುದ್ಧ–*
*ಸುಚೇತಾ ನಾರಾಯಣ್ ದಸ್ತಾನೆ* *(ಉಲ್ಲೇ) 12*

*5. (1994) 1 ಎಸ್‌ಸಿಸಿ 337*
*ವಿ. ಭಗತ್ –ವಿರುದ್ಧ– ಡಿ. ಭಗತ್ (ಶ್ರೀಮತಿ)* *(ಉಲ್ಲೇ) 12*

*6. (2007) 4 ಎಸ್‌ಸಿಸಿ 511*
*ಸಮರ್ ಘೋಷ್ –ವಿರುದ್ಧ– ಜಯ ಘೋಷ್* *(ಉಲ್ಲೇ) 13*

*7. (1988) 4 ಎಸ್‌ಸಿಸಿ 247*
*ರಾಮನಾರಾಯಣ ಗುಪ್ತ –ವಿರುದ್ಧ– ರಾಮೇಶ್ವರಿ ಗುಪ್ತ* *(ಉಲ್ಲೇ) 18*

*8. ಎಐಆರ್ 1991 ಕಲ್ಕತ್ತಾ 123*
*ಪ್ರಮಥ ಕುಮಾರ್ ಮೈಟಿ -ವಿರುದ್ಧ- ಆಶಿಮಾ ಮೈಟಿ (ಉಲ್ಲೇ) 19*
*9. ಎಐಆರ್ 1934 ಅಲಹಾಬಾದ್ 273*
*ಎಂಟಿ. ಟಿಟ್ಲೆ -ವಿರುದ್ಧ- ಆಲ್‌ಫ್ರೆಡ್ ರಾಬರ್ಟ್ ಜೋನ್ಸ್ (ಉಲ್ಲೇ) 20*

ಅಪೀಲುದಾರರ ಪರವಾಗಿ: ಶ್ರೀಮತಿ ವಿ. ವಿದ್ಯಾ ಅಯ್ಯರ್, ವಕೀಲರು
ಪ್ರತ್ಯಪೀಲುದಾರರ ಪರವಾಗಿ: ಶ್ರೀ ಎಸ್.ಎಸ್. ಯಡ್ರಾಮಿ, ವಕೀಲರು

## ತೀರ್ಪು

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ:**

ಅಪೀಲುದಾರ / ಪತ್ನಿಯು, ಎದುರುದಾರ / ಪತಿಯೊಂದಿಗಿನ ತನ್ನ ವಿವಾಹವನ್ನು ವಿಘಟಿಸುವ ಮೂಲಕ ದಿನಾಂಕ 30.10.2014 ರ ಸಂ. 221/2013ರ ವೈವಾಹಿಕ ಮೊಕದ್ದಮೆಯಲ್ಲಿನ ಕಡತ ಸಂಬಂಧ ಬಳ್ಳಾರಿಯ ಕೌಟುಂಬಿಕ ನ್ಯಾಯಾಲಯದ (ಸಂಕ್ಷಿಪ್ತತೆಗಾಗಿ 'ಕೌಟುಂಬಿಕ ನ್ಯಾಯಾಲಯ') ಪ್ರಧಾನ ನ್ಯಾಯಾಧೀಶರು ನೀಡಿದ ವಿಚ್ಛೇದನ ಡಿಕ್ರಿಯಿಂದ ಬಾಧಿತರಾಗಿದ್ದಾರೆ.

2. ಹಿಂದೂ ವಿವಾಹ ಅಧಿನಿಯಮ, 1955 ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 13 ನೇ ಪ್ರಕರಣದ ಮೇರೆಗೆ ಕೌಟುಂಬಿಕ ನ್ಯಾಯಾಲಯದ ಮುಂದೆ ವಿಚ್ಛೇದನಕ್ಕಾಗಿ ಪತಿಯು ಅರ್ಜಿಯನ್ನು ಸಲ್ಲಿಸಿದ್ದು, ಬಳ್ಳಾರಿಯಲ್ಲಿ 01.12.2011 ರಂದು ತಮ್ಮ ಸಂಪ್ರದಾಯದ ಪ್ರಕಾರ ಪಕ್ಷಕಾರರು ವಿವಾಹವಾಗಿರುವುದನ್ನು ಸಂಕ್ಷೇಪವಾಗಿ ತಿಳಿಸಿದ್ದಾರೆ. ಸಂಬಂಧಪಟ್ಟ ಸಮಯದ ಅವಧಿಯಲ್ಲಿ, ಅವನು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪತ್ನಿಯು ಎಂ.ಸಿ.ಎ ಪದವಿ ಪಡೆದಿರುತ್ತಾರೆ. ವಿವಾಹವು ಸಾಂಗವಾಗಿ ನೆರವೇರಿದ್ದು ಪತ್ನಿಯು ಬಳ್ಳಾರಿಯಲ್ಲಿರುವ ಅವನ ತಂದೆತಾಯಿಗಳ ಮನೆಯಲ್ಲಿ ಜೊತೆಗೂಡಿದ್ದಾರೆ. ಅವರು 12.12.2011 ರಿಂದ 16.12.2011 ರ ವರೆಗೆ ಮಧುಚಂದ್ರಕ್ಕಾಗಿ ಹೋಗಿದ್ದು ಮುನ್ನಾರ್ ಮತ್ತು

ಅಲ್ಲೆಪ್ಪಿಯಲ್ಲಿ ಉಳಿದುಕೊಂಡಿದ್ದಾರೆ. 15.12.2011 ರಂದು ಪತಿಯು, ಪತ್ನಿಗೆ ಮೂರು ತಿಂಗಳ ಅವಧಿಯವರೆಗೆ ಅವಳ ಪೋಷಕರ ಮನೆಯಲ್ಲಿ ಉಳಿಯಬೇಕೆಂದು ಹಾಗೆ ಬೆಂಗಳೂರಿನಲ್ಲಿ ತಾವು ಉಳಿಯಲು ಮನೆಯನ್ನು ನೋಡುತ್ತೇನೆಂದು ತಿಳಿಸಿದ್ದಾನೆ. ಕೂಡಲೇ ಪತ್ನಿಯು, ಸಿಟ್ಟಿಗೆದ್ದು, ಒಳಗಡೆಯಿಂದ ಬಾಗಿಲನ್ನು ಲಾಕು ಮಾಡಿಕೊಂಡು ಎರಡು ಗಂಟೆಗಳಿಗಿಂತಲೂ ಹೆಚ್ಚು ಕಾಲದವರೆಗೆ ಇದನ್ನು ತೆಗೆದಿರಲಿಲ್ಲ. ಅವನು ಬಲವಂತವಾಗಿ ಬಾಗಿಲನ್ನು ತೆಗೆಯಲು ಪ್ರಯತ್ನಿಸಿದ್ದಾಗ, ಅವಳು ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಬೆದರಿಸಿದ್ದಾಳೆ. ಕೂಡಲೇ ಅವನು ಅವಳ ತಂದೆಯನ್ನು ಸಂಪರ್ಕಿಸಿ ಅವಳ ತಂದೆಯು ದೂರವಾಣಿ ಮುಖಾಂತರ ಅವಳಿಗೆ ಬುದ್ಧಿವಾದ ಹೇಳಿದ ನಂತರ ಅಷ್ಟೆ ಪತ್ನಿಯು ಸಾಮಾನ್ಯ ಸ್ಥಿತಿಗೆ ಮರಳಿದ್ದಾಳೆ. ಅವರು ಬೆಂಗಳೂರಿನ ಮೂಲಕ 17.12.2011 ರಂದು ಬಳ್ಳಾರಿಗೆ ಹಿಂತಿರುಗಿದ್ದಾರೆ. ಬೆಂಗಳೂರಿನ ಬಸ್ ನಿಲ್ದಾಣದಲ್ಲಿ ಪತ್ನಿಯು ಲಗ್ಗೇಜು ಮತ್ತು ಚಪ್ಪಲಿಯನ್ನು ಹಿಂದೆ ಬಿಟ್ಟು ಕುಡಿದಿರುವ ವ್ಯಕ್ತಿಯಂತೆ ಬರಿಗಾಲಲ್ಲಿ ತಿರುಗಾಡಲು ಶುರುಮಾಡಿದ್ದಾಳೆ. ಅವಳನ್ನು ಗಟ್ಟಿಯಾಗಿ ಅಲುಗಾಡಿಸುವ ಮೂಲಕ ಪತಿಯು ಎಚ್ಚರಿಸಿದ ನಂತರವಷ್ಟೇ ಅರಿವಿಗೆ ಬಂದಿದ್ದಾಳೆ. ಬಳ್ಳಾರಿಗೆ ಹಿಂದಿರುಗಿದ ನಂತರ, ಈ ಸಂದರ್ಭದಲ್ಲಿ, ಅವಳು, ತಾನು ಗರ್ಭಿಣಿಯಾಗಿದ್ದೇನೆಂದು ದೂರಿದ್ದರಿಂದ ಸ್ತ್ರೀರೋಗ ವೈದ್ಯರ ಬಳಿಗೆ ಕರೆದೊಯ್ಯಲಾಗಿತ್ತು. ಆದರೆ ಗರ್ಭಧಾರಣೆಯ ಪರೀಕ್ಷೆಯು ನೆಗೆಟಿವ್ ಬಂದಿದೆ ಅವಳು ಯಾರೋ ತಮ್ಮನ್ನು ಕಿಟಕಿಗಳ ಮುಖಾಂತರ ನೋಡುತ್ತಿರುವರೆನ್ನುವ ನೆಪದಿಂದ ಲೈಂಗಿಕ ಸಂಪರ್ಕಕ್ಕೆ ಒಲ್ಲದ ಮನಸ್ಸಿನವಳಾಗಿದ್ದಳು. ಕಿಟಕಿಗಳನ್ನು ಮುಚ್ಚಿದರೆ, ಆಗ ಅವಳು, ಯಾರೋ ಬಾಗಿಲನ್ನು ಬಡಿಯುತ್ತಿರುವರೆಂದು ಹೇಳಲು ಪ್ರಾರಂಭಿಸುತ್ತಿದ್ದಳು. ಬಾಗಿಲನ್ನು ಯಾರೂ ಬಡಿದಿಲ್ಲವೆಂದು ಮನವೊಲಿಸಲು ಪ್ರಯತ್ನಿಸಿದರೆ, ಅವಳು, ಯಾರದೋ ಧ್ವನಿ ಕೇಳಿಸುತ್ತಿದ್ದು, ಅದು ಪಾಪಕೃತ್ಯವಾಗಿರುವುದರಿಂದ ಲೈಂಗಿಕ ಸಂಸರ್ಗವನ್ನು ಹೊಂದಬಾರದೆಂದು ಹೇಳಲು ಶುರುಮಾಡುತ್ತಿದ್ದಳು. ಅವಳು ಕೆಲವೊಮ್ಮೆ ವಿಭಿನ್ನವಾಗಿ ಮತ್ತು ಬೇಜವಾಬ್ದಾರಿಯುತ ಮಾರ್ಗದಲ್ಲಿ ವರ್ತಿಸುತ್ತಾ ಇರುತ್ತಿದ್ದಳು. 2012 ರ ಜನವರಿಯ ಮೊದಲ ತಿಂಗಳ ಅವಧಿಯಲ್ಲಿ ಅವಳೂ ಒಮ್ಮೆ ಗ್ಯಾಸ್ ಸ್ಟವ್‌ನ ಮುಂದೆ ನಿಂತು, ಗ್ಯಾಸನ್ನು ಹೊತ್ತಿಸದೆ ಹಿಡಿ ಗುಬುಟನ್ನು ತಿರುಗಿಸಿ ನಿಂತುಕೊಂಡಿದ್ದು ಕಂಡುಬಂತು. ಅವನು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು ವಾರಾಂತ್ಯಗಳಲ್ಲಿ ಮತ್ತು

ಸರ್ಕಾರಿ ರಜಾದಿನಗಳ ಅವಧಿಯಲ್ಲಿ ಬಳ್ಳಾರಿಗೆ ಬರುತ್ತಿದ್ದನು. ಅವನು 14.01.2012 ರಂದು ಬಳ್ಳಾರಿಗೆ ಬಂದಿದ್ದಾಗ, ಅವಳು, ತಾನು ಅವನೊಂದಿಗೆ ಬೆಂಗಳೂರಿಗೆ ಬರುವ ಬಯಕೆಯನ್ನು ವ್ಯಕ್ತಪಡಿಸಿದ್ದಾಳೆ. ಬೆಂಗಳೂರಿನಲ್ಲಿ ಅವನಿಗೆ ಮನೆ ಇಲ್ಲದಿರುವುದರಿಂದ ಕೂಡಲೇ ಬೆಂಗಳೂರಿಗೆ ಮನೆಯನ್ನು ವರ್ಗಾಯಿಸುವುದಕ್ಕೆ ತನ್ನಿಂದ ಸಾಧ್ಯವಿಲ್ಲವೆಂದು ವ್ಯಕ್ತಪಡಿಸಿದ್ದಾನೆ. ಅವಳು, ಇತರರೊಂದಿಗೆ ಅವನ ವಿವಾಹೇತರ ಸಂಬಂಧದ ಬಗ್ಗೆ ದೂರಲು ಶುರುಮಾಡಿದ್ದಾಳೆ. ಬೆಳಿಗ್ಗೆ ತಡವಾಗಿ ಏದ್ದೇಳಲು ಶುರುಮಾಡಿದ್ದು ಯಾವುದೇ ಮನೆಗೆಲಸಗಳನ್ನು ಮಾಡುತ್ತಿರಲಿಲ್ಲ. ಅವಳು ತಾನು ಕೆಲಸದಾಳಿನಂತೆ ತಮ್ಮ ಮನೆಯಲ್ಲಿ ದುಡಿಯಲು ಬಂದಿಲ್ಲವೆಂದು ಪ್ರಕಟಪಡಿಸಿದ್ದಾಳೆ. ಕೆಲವು ವೇಳೆ, ಅವಳು ರಾತ್ರಿಯ ಹೊತ್ತು ಊಟಮಾಡದೆ ಮಲಗುತ್ತಿದ್ದಳು ಆದರೆ ಮಧ್ಯರಾತ್ರಿಯಲ್ಲಿ ಎದ್ದು ಹಸಿವಾಗುತ್ತಿದೆಯೆಂದು ದೂರುತ್ತಿದ್ದಳು. 30.01.2012 ರಂದು, ಯಾವುದೇ ಪ್ರಚೋದನೆಯಿಲ್ಲದೆ ತಮ್ಮ ಸ್ಥಳೀಯ ಗ್ರಾಮದಲ್ಲಿ ಪಾತ್ರೆಗಳನ್ನು ಎಸೆಯಲು ಪ್ರಾರಂಭಿಸಿದ್ದಳು, ಘಟನೆ ನಡೆದ ಸಂದರ್ಭದಲ್ಲಿ, ಅವನ ತಾಯಿಯ ಕಣ್ಣುಗಳಿಗೆ ಗಾಯಗಳಾಗಿದ್ದವು. 01.02.2012 ರಂದು, ಅವಳ ತಂದೆಯು ಬಳ್ಳಾರಿಯ ಡಾ॥ ಚಂದ್ರಾರವರ ನರ ಮತ್ತು ಮೂರ್ಛೆರೋಗ (ಅಪಸ್ಮಾರ) ಕೇಂದ್ರಕ್ಕೆ ಅವಳನ್ನು ಕರೆದೊಯ್ದಿದ್ದು, ಅಲ್ಲಿ ಅವಳಿಗೆ 'ಅಡ್ಜಸ್ಟ್‌ಮೆಂಟ್ ಡಿಸಾರ್ಡರ್' ಎಂಬುದು ಪತ್ತೆಯಾಗಿತ್ತು. ಅವಳಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗಿತ್ತು ಮತ್ತು 20 ದಿನಗಳ ಅವಧಿವರೆಗೆ ಅವಳ ವರ್ತನೆಯನ್ನು ಪರೀಕ್ಷಿಸಲು ಸಲಹೆ ಮಾಡಲಾಗಿತ್ತು. 12.02.2013 ರಂದು, ಅವನು ಅದೇ ಆಸ್ಪತ್ರೆಗೆ ಅವಳನ್ನು ಕರೆದೊಯ್ದಿದ್ದು ಇನ್ನೂ 20 ದಿನಗಳವರೆಗೆ ವೈದ್ಯಕೀಯ ಚಿಕಿತ್ಸೆಯನ್ನು ಮುಂದುವರಿಸಲಾಗಿತ್ತು. 2012 ರ ಮಾರ್ಚ್ ಕಳೆದ ವಾರದಲ್ಲಿ ಅವಳು ಕೂಡಲೇ ಎದ್ದುಬಿಟ್ಟು ಅವನ ಮೂಗು ಮತ್ತು ಬಾಯಿಯನ್ನು ಅವಳ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡಿದ್ದಳು ಮತ್ತು ಅವಳ ಹಿಡಿತದಿಂದ ಅವನು ತಪ್ಪಿಸಿಕೊಳ್ಳುವುದು ತುಂಬಾ ಕಷ್ಟವಾಗಿತ್ತು. ಘಟನೆಯನ್ನು ಅವಳ ತಂದೆಗೆ ತಿಳಿಸಿದಾಗ, ಅವರು 02.04.2012 ರಂದು ಬಳ್ಳಾರಿಗೆ ಬಂದಿದ್ದು, ಅವಳು 'ಬಿಪೊಲರ್ ಅಡ್ಜಸ್ಟ್‌ಮೆಂಟ್ ಡಿಸಾರ್ಡರ್' ನಿಂದ ಬಳಲುತ್ತಿರುವಳೆಂಬುದನ್ನು ಮತ್ತು ದಾವಣಗೆರೆಯ ಜೆಜೆಎಂ ಮೆಡಿಕಲ್ ಕಾಲೇಜಿನ ಮನೋರೋಗ ಪ್ರೊಫೆಸರ್ ಆದ ಡಾ॥ ಸಿ.ವೈ. ಸುದರ್ಶನ್ ರವರಲ್ಲಿ 2002 ರಿಂದ ಚಿಕಿತ್ಸೆಯಲ್ಲಿರುವುದನ್ನು ಪ್ರಕಟಪಡಿಸಿದ್ದಾನೆ. 03.04.2012

ರಂದು ಅವಳು 'ಆಡಿಟರಿ ಹಲ್ಲುಸಿನೇಷನ್ಸ್' ನ ರೋಗಲಕ್ಷಣಗಳು ಪತ್ತೆಯಾಗಿದ್ದವು ಮತ್ತು ಅವಳನ್ನು ಬಳ್ಳಾರಿಯ ಮನೋರೋಗ ತಜ್ಞ ಡಾ॥ ಸಂಪತ್ ಕುಮಾರ್ ಇವರ ಬಳಿಗೆ ಕರೆದೊಯ್ಯಲಾಗಿತ್ತು ಆಗ ನಿರ್ದಿಷ್ಟವಾದ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿರುವ ಡಾ॥ ವೈ.ಸಿ. ಜನಾರ್ಧನ ರೆಡ್ಡಿಯವರ ಬಳಿಗೆ ಕಳುಹಿಸಲಾಗಿತ್ತು. ಅಂತಿಮವಾಗಿ, ಅವಳು ವಾಸಿಯಾಗದ ಮೆಂಟಲ್ ಡಿಸಾರ್ಡರ್‌ನಿಂದ ಬಳಲುತ್ತಿರುವುದನ್ನು, ಅವಳ ಮಾನಸಿಕ ಸ್ಥಿತಿಯನ್ನು ಬಹಿರಂಗಪಡಿಸದೆ ವಿವಾಹವನ್ನು ನೆರವೇರಿಸಿರುವುದನ್ನು ಮತ್ತು ಸಮಾಲೋಚನಾ ವೈದ್ಯರ ಸಲಹೆಯ ವಿರುದ್ಧ ನಡೆಸಿರುವುದನ್ನು ವಿವರಿಸಲಾಗಿತ್ತು ಪತ್ನಿ ಮತ್ತು ಅವಳ ಕುಟುಂಬದ ಸದಸ್ಯರು ಅವಳ ಮಾನಸಿಕ ಡಿಸಾರ್ಡರನ್ನು ತಿಳಿಸದೆ ಅವಳ ವಿವಾಹವನ್ನು ನೆರವೇರಿಸುವ ಮೂಲಕ ಅವನಿಗೆ ಮೋಸ ಮಾಡಿರುತ್ತಾರೆ. ಅರ್ಜಿದಾರನ ಜೀವನ ಅವನದಲ್ಲದ ತಪ್ಪಿನಿಂದ ಹಾಳಾಗಿರುತ್ತದೆ. ಅವಳ ವರ್ತನೆಯಿಂದ ಮಾನಸಿಕವಾಗಿ ಕ್ರುದ್ಧರಾಗಿದ್ದಾರೆ ಮತ್ತು ಅವಳ ಮಾನಸಿಕ ಅಸ್ವಸ್ಥತೆಯ ಕಾರಣದಿಂದ ಅವನು ತನ್ನ ವೈವಾಹಿಕ ಸಂಬಂಧವನ್ನು ಮುಂದುವರಿಸುವ ಸ್ಥಿತಿಯಲ್ಲಿಲ್ಲ.

3. ಪತ್ನಿಯು ಅರ್ಜಿಯನ್ನು ಪ್ರತಿರೋಧಿಸಿದ್ದಾಳೆ. ಅವಳ ಪ್ರತಿವಾದ ಏನೆಂದರೆ, ವಿವಾಹದ ನಂತರ, ಪತಿಯು ಅಲ್ಪಕಾಲಾವಧಿಯೊಳಗೆ ಅವಳನ್ನು ಬೆಂಗಳೂರಿಗೆ ಕರೆದೊಯ್ಯುವ ಭರವಸೆ ನೀಡುವ ಮೂಲಕ ಬಳ್ಳಾರಿಯಲ್ಲಿ ಪತಿಯ ಪೋಷಕರೊಂದಿಗೆ ಉಳಿಯುವಂತೆ ಮಾಡಿರುವುದು. ಅಷ್ಟೇ ಅಲ್ಲದೆ ಅವಳ ಪ್ರತಿವಾದವೇನೆಂದರೆ, ಅವಳ ಅತ್ತೆ–ಮಾವಂದಿರು ತನ್ನನ್ನು ಚೆನ್ನಾಗಿ ನೋಡುಕೊಳ್ಳುತ್ತಿರಲಿಲ್ಲ ಮತ್ತು ತನ್ನನ್ನು ಕೆಲಸದವಳಂತೆ ಕಾಣುತ್ತಿದ್ದರು, ಅವಳು ವಿಶ್ರಾಂತಿಯಿಲ್ಲದೆ ಕೆಲಸ ನಿರ್ವಹಿಸುತ್ತಿದ್ದಳು ಎಂಬುದಾಗಿದೆ. ಅವಳ ಅತ್ತೆ ಯಾವಾಗಲೂ ಬೈಯ್ಯುತ್ತಿದ್ದು ಮಾನಸಿಕ ಒತ್ತಡಕ್ಕೆ ಕಾರಣವಾಗಿದ್ದು ಇದು ಅವಳಿಗೆ ಸಹಿಸಲಸದಳವಾಗಿದೆ. ಪತಿಯ ಆಪಾದನೆ, ಅವಳು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವುದು ಹುಸಿಯಾಗಿದ್ದು, ಕೆಲಸದ ಭಾರದಿಂದ ಕಾರಣಮಾತ್ರವಾಗಿದ್ದು, ಅವನ ಪೋಷಕರಿಂದ ಮಾನಸಿಕ ಒತ್ತಡ ಉಂಟಾಗಿದ್ದು, ಅವಳು ಹೇಳಲಾಗದ ಮಾನಸಿಕ ಒತ್ತಡಕ್ಕೆ ನೂಕಿರುವಳು ಎಂಬುದಾಗಿದೆ. ಅವನ ಗುರಿಯನ್ನು ಮುಟ್ಟಲು, ಅವಳಿಂದ

ವಿಚ್ಛೇದನವನ್ನು ಪಡೆಯಲು ಕಾಗೆ ಮತ್ತು ಗುಬ್ಬಿಯ ಕಥೆಯನ್ನು ಎತ್ತಿಕೊಂಡಿದ್ದಾರೆ ಎಂಬುದಾಗಿದೆ.

4. ಅಧಿವಿಚಾರಣೆಯ ಸಮಯದಲ್ಲಿ, ಪತಿಯು ಪ್ರಾಸಾ–1 ಮತ್ತು ಪತ್ನಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರು ಪ್ರಾಸಾ–2 ಮತ್ತು ಪ್ರಾಸಾ–3 ಹಾಗೂ ಆತನ ತಾಯಿ ಪ್ರಾಸಾ–4 ಆಗಿ ಪರೀಕ್ಷಿಸಲಾಗಿದ್ದು; ನಿಶಾನೆ ಪಿ1 ರಿಂದ ಪಿ16 ರವರೆಗಿನ ದಸ್ತಾವೇಜುಗಳನ್ನು ಗುರುತುಮಾಡಲಾಗಿತ್ತು. ಪತ್ನಿಯು, ಅವಳೇ ಖಂಡಿಸುವ ಸಾಕ್ಷ್ಯವನ್ನು ನಡೆಸುತ್ತಿದ್ದಾಳೆ. ಅಧಿವಿಚಾರಣೆಯು ಪೂರ್ಣಗೊಂಡ ನಂತರ ಅವಳನ್ನು ಮೌಲ್ಯಮಾಪನಕ್ಕಾಗಿ ನಿಮ್ಹಾನ್ಸ್‌ಗೆ ಕಳುಹಿಸಲಾಗಿತ್ತು ಮತ್ತು ನ್ಯಾಯಾಲಯವು ವರದಿಯನ್ನು ಸಹ ಸ್ವೀಕರಿಸಿತ್ತು.

5. ಕೌಟುಂಬಿಕ ನ್ಯಾಯಾಲಯವು, ಮಾನಸಿಕ ಕ್ರೌರ್ಯತೆ ಮತ್ತು ವಾಸಿಯಾಗದ ಮನಸ್ಸಿನ ಅಸ್ವಸ್ಥತೆಯ ಆಧಾರದ ಮೇಲೆ ಇವೆರಡರ ಮೇಲೂ ದಸ್ತಾವೇಜೀಯ ಸಾಕ್ಷ್ಯದ ಒಟ್ಟಾರೆ ಮೌಲ್ಯಮಾಪನದ ಮೇಲೆ ಅರ್ಜಿಯನ್ನು ಪುರಸ್ಕರಿಸಿತ್ತು.

6. ಪ್ರಶ್ನಿತ ತೀರ್ಪನ್ನು ಟೀಕಿಸಿರುವ ಅಪೀಲುದಾರ/ಪತ್ನಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀಮತಿ ವಿ. ವಿದ್ಯಾ ಅಯ್ಯರ್ ರವರು, ವಿವಾಹದ ನಂತರ, ಪತ್ನಿಯು ಮೂರು ತಿಂಗಳುಗಳ ವರೆಗೆ ಮಾತ್ರ ಪತಿಯೊಂದಿಗೆ ಸಹಬಾಳ್ವೆ ನಡೆಸಿರುತ್ತಾರೆ; ದಾಖಲೆಯಲ್ಲಿರುವ ಸಂಪೂರ್ಣ ವೈದ್ಯಕೀಯ ಸಾಕ್ಷ್ಯ ನಿಜವಾಗಿವೆ ಮತ್ತು ಸತ್ಯವಾಗಿರುವುದನ್ನು ಒಪ್ಪಿಕೊಂಡು ಪತಿಯೂ ಕೂಡ ವಾಸಿಯಾಗದ ಮಾನಸಿಕ ಅಸ್ವಸ್ಥತೆಯ ಪ್ರಕರಣವನ್ನು ಸರಿಪಡಿಸಲು ಒಪ್ಪಿಕೊಂಡು ಪತಿಯೂ ಕೂಡ ವಾಸಿಯಾಗದ ಮಾನಸಿಕ ಅಸ್ವಸ್ಥತೆಯ ಪ್ರಕರಣವನ್ನು ರುಜುವಾತುಪಡಿಸಲು ವಿಫಲರಾಗಿರುವುದು, ಅಧಿನಿಯಮದ 13(1)(iii) ನೇ ಪ್ರಕರಣದ ಮೂಲ ಅಗತ್ಯವಾಗಿದೆ. ಪತ್ನಿಯು ಡಿಸ್ಟಿಂಕ್ಷನ್‌ನಲ್ಲಿ ಎಂಸಿಎ ಪದವಿಯಲ್ಲಿ ಉತ್ತೀರ್ಣರಾಗಿದ್ದು, ಅವಳ ಅಧ್ಯಯನ ಮುಂದುವರಿದಿದ್ದಾಗ ಆರು ವರ್ಷಗಳ ಕಾಲ ಲೇಡೀಸ್ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದಳು. ಅವಳು ಅಂಥ ಮಾನಸಿಕ ಅಸ್ವಸ್ಥತೆಯಿಂದ ಯಾವುದೇ ವಿಧದಲ್ಲಿ ಬಳಲುತ್ತಿದ್ದರೆ, ಅವಳು ತನ್ನ ಅಧ್ಯಯನವನ್ನು

ಮುಂದುವರಿಸಲು ಮತ್ತು ಡಿಸ್ಟಿಂಕ್ಷನ್ ಪಡೆದು ಹೊರಬರಲು ಸಾಧ್ಯವಾಗುತ್ತಿರಲಿಲ್ಲ. ಇವೆಲ್ಲದರ ನಡುವೆ ಅವಳು ತನ್ನ ವೈವಾಹಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಒಪ್ಪಿಕೊಂಡಿದ್ದಾಳೆ. ಅವಳು ನಿಯತವಾಗಿ ಔಷಧವನ್ನು ತೆಗೆದುಕೊಂಡರೆ ಮತ್ತು ಅವಳ ಕುಟುಂಬ ಅವಳನ್ನು ಬೆಂಬಲಿಸಿದರೆ ಅವಳ ವೈವಾಹಿಕ ಜೀವನವನ್ನು ನಡೆಸಲು ಅವಳಿಗೆ ಯಾವುದೇ ಸಮಸ್ಯೆಯಿಲ್ಲವೆಂದು ವೈದ್ಯರೂ / ಪ್ರಾಸಾ 3 ಸಹ ತನ್ನ ಸಾಕ್ಷ್ಯದಲ್ಲಿ ತಿಳಿಸಿದ್ದಾರೆ. ಅವಳನ್ನು ಫೆಬ್ರವರಿ 2013 ರ ಅವಧಿಯಲ್ಲಿ ಪರೀಕ್ಷಿಸಿದ್ದಾಗ ಅವಳಿಗೆ ಯಾವುದೇ ಮಾನಸಿಕ ರೋಗಲಕ್ಷಣಗಳು ಮತ್ತು ಮನಸ್ಥಿತಿ ರೋಗಲಕ್ಷಣಗಳಿಲ್ಲವೆಂಬುದನ್ನು ನಿಮ್ಹಾನ್ಸ್‌ನ ವರದಿಯೂ ಕೂಡ ತಿಳಿಸುತ್ತದೆ. ಅವಳ ಪ್ಯಾರಾನಾಯ್ಡ್ ಶಿಜೊಫ್ರೆನಿಯಾ ಉಪಶಮನದಲ್ಲಿದೆ. ***ಕೊಲ್ಲಮ್ ಚಂದ್ರ ಶೇಖರ್ –ವಿರುದ್ಧ– ಕೊಲ್ಲಮ್ ಪದ್ಮ ಲತಾ***[1], ರವರ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ಅವಳು ನಂಬಿಕೆಯನ್ನು ಇಟ್ಟಿರುವಾಗ, ಮಾನ್ಯ ವಕೀಲರು, ಪತಿಯು ಗಂಭೀರವಾದ ಮಾನಸಿಕ ಅಸ್ವಸ್ಥತೆಯು ಇರುವುದನ್ನು ರುಜುವಾತುಪಡಿಸಲು ವಿಫಲರಾಗಿದ್ದು, ಇದು ಸಾಮಾನ್ಯ ವೈವಾಹಿಕ ಜೀವನವನ್ನು ನಡೆಸುವ ದಂಪತಿಯ ಮಾರ್ಗದಲ್ಲಿ ಬಂದಿರುವುದಿಲ್ಲವೆಂದು ನಿವೇದಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯವು ವಿಷಯದ ಸಂಗತಿಯನ್ನು ಪರಿಗಣಿಸಿರುವುದಿಲ್ಲ ಮತ್ತು ತಾಂತ್ರಿಕ ಆಧಾರಗಳ ಮೇಲೆ ಪತ್ನಿಯು ವಾಸಿಯಾಗದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವಳೆಂದು ಅಭಿಪ್ರಾಯಪಟ್ಟು ಅರ್ಜಿಯನ್ನು ಪುರಸ್ಕರಿಸಿದೆ. ಕೌಟುಂಬಿಕ ನ್ಯಾಯಾಲಯದ ಮುಂದೆ ಅಧಿವಿಚಾರಣೆಯು ನಡೆಯುವ ಅವಧಿಯಲ್ಲಿ ಪತ್ನಿಯು ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಳು. ಅವಳ ಅರ್ಜಿ ಸಂಬಂಧ ಯಾವುದೇ ಆದೇಶವನ್ನು ಹೊರಡಿಸದೆ, ಕೌಟುಂಬಿಕ ನ್ಯಾಯಾಲಯವು ಅದರ ಗುಣಾವಗುಣಗಳ ಮೇಲೆ ನ್ಯಾಯನಿರ್ಣಯ ಮಾಡಲು ಆತುರಪಟ್ಟಿದ್ದು, ಅದು ಗಂಭೀರ ನ್ಯಾಯದ ವಿಫಲತೆಗೆ ಕಾರಣವಾಗಿದೆ. ವಿಚ್ಛೇದನದ ಡಿಕ್ರಿಯನ್ನು ಹೊರಡಿಸುವ ಸಮಯದಲ್ಲಿ ಶಾಶ್ವತ ಜೀವನಾಂಶವನ್ನು ನೀಡದಿರುವುದು ಪ್ರಶ್ನಿತ ತೀರ್ಪಿನಲ್ಲಿ ಮತ್ತೊಂದು ನ್ಯೂನ್ಯತೆಯಾಗಿದೆ. ಆದುದರಿಂದ ಇದನ್ನು ಈ ನ್ಯಾಯಾಲಯದ ಅಪೀಲು ಅಧಿಕಾರವ್ಯಾಪ್ತಿಯಲ್ಲಿ ತಳ್ಳಿಹಾಕಲು ತಕ್ಕುದಾಗಿರುತ್ತದೆಯೆಂದು ನಿವೇದಿಸಿದ್ದಾರೆ.

1. (2014) 1 ಎಸ್‌ಸಿಸಿ 225

7. ಇದಕ್ಕೆ ಉತ್ತರವಾಗಿ, ಎದುರುದಾರ / ಪತಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಎಸ್.ಎಸ್. ಯಡ್ರಾಮಿಯವರು, ಕೌಟುಂಬಿಕ ನ್ಯಾಯಾಲಯದ ತೀರ್ಪನ್ನು ಸಮರ್ಥಿಸಿಕೊಳ್ಳುವಾಗ, 2002 ರಿಂದಲೂ ಪತ್ನಿಗೆ ಚಿಕಿತ್ಸೆ ನೀಡಿದ್ದ ಪ್ರಾಸಾ 3 / ವೈದ್ಯರು, ಆ ಮಾನಸಿಕ ಅಸ್ವಸ್ಥತೆಯನ್ನು ದೃಢಪಡಿಸಿದ್ದು, ಅವಳು ಬಳಲುತ್ತಿರುವ ಅಸ್ವಸ್ಥತೆಯನ್ನು ವಾಸಿಮಾಡಲಾಗುವುದಿಲ್ಲವೆಂದು, ಅದನ್ನು ಚಿಕಿತ್ಸೆ ಮೂಲಕ ಮಾತ್ರ ನಿಯಂತ್ರಿಸಬಹುದಾಗಿದೆಯೆಂದು ನಿವೇದಿಸಿದ್ದಾರೆ. ವೈವಾಹಿಕ ಗೃಹದಲ್ಲಿ ಅಲ್ಪಕಾಲಾವಧಿಯಲ್ಲಿ ಅವಳು ಉಳಿದುಕೊಂಡಿದ್ದ ಅವಧಿಯಲ್ಲಿ, ಅವಳು ತನ್ನ ಪತಿಯ ಮೇಲೆ ಮತ್ತು ಅತ್ತೆಯ ಮೇಲೂ ದೈಹಿಕ ಮತ್ತು ಮಾನಸಿಕ ಎರಡರ ಮೇಲೂ ಕ್ರೌರ್ಯತೆಯನ್ನು ಉಂಟುಮಾಡಿದ್ದಾಳೆ. ***ಪಂಕಜ್ ಮಹಾಜನ್ –ವಿರುದ್ಧ– ಡಿಂಪಲ್ ಅಲಿಯಾಸ್ ಕಾಜಲ್*** [2], ರವರ ವಿಷಯದಲ್ಲಿ ಅದೇ ರೀತಿಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು, ಪತಿಯ ಮನಸ್ಸಿನಲ್ಲಿ, ಅವಳೊಂದಿಗೆ ಜೀವನ ಸಾಗಿಸುವುದು ತನಗೆ ತೊಂದರೆಯಾಗಿರುವುದು ಮತ್ತು ಹಾನಿಯಾಗಿರುವುದು ಕಂಡು ಬಂದಿದ್ದು ಆ ಮೂಲಕ ಯುಕ್ತ ಗುಮಾನಿಯಿರುವ ಸಂಬಂಧದಲ್ಲಿ ಪತ್ನಿಯ ಕೃತ್ಯಗಳೂ ಕಾರಣವಾಗಿರುತ್ತವೆ. ಆ ಮೂಲಕ ಬಾಧಿತ ಪತಿಯ ಹೆಸರಿನಲ್ಲಿ ವಿಚ್ಛೇದನ ಡಿಕ್ರಿಯೊಂದಿಗೆ ವಿವಾಹವನ್ನು ವಿಘಟನೆಗೊಳಿಸಲಾಗಿದೆಯೆಂದು ಅಭಿಪ್ರಾಯಪಟ್ಟಿದೆಯೆಂದು ನಿವೇದಿಸಿದ್ದಾರೆ.

***ರವಿಕುಮಾರ್ –ವಿರುದ್ಧ– ಹೇಮಾ ದೇಶ್‌ಪಾಂಡೆ*** [3] ಯವರ ವಿಷಯದಲ್ಲಿ ಈ ನ್ಯಾಯಾಲಯದಲ್ಲಿ ಪತ್ನಿಯು ಪ್ಯಾರಾನಾಯ್ಡ್ ಶಿಜೋಪ್ರೇನಿಯಾದಿಂದ ಬಳಲುತ್ತಿರುವಳೆಂದು ಆಪಾದಿಸಿದ್ದರು. ಪ್ರಸ್ತುತ ಪ್ರಕರಣದಲ್ಲಿ ಕೂಡ, ಸದೃಶ ದೃಷ್ಟಿಯನ್ನು ತಳೆಯಲಾಗಿದೆಯೆಂದು ಮಾನ್ಯ ವಕೀಲರು ಮತ್ತೆ ಮುಂದುವರೆಸಿದ್ದಾರೆ. ಪತ್ನಿಗೆ ಪ್ಯಾರಾನಾಯ್ಡ್ ಶಿಜೊಫ್ರೇನಿಯಾ ಕಾಯಿಲೆಯಿರುವುದನ್ನು ಗುರುತಿಸಲಾಗಿತ್ತು. ಈ ಸನ್ನಿವೇಶಗಳ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯವು, ಕ್ರೌರ್ಯತೆಯ ಆಧಾರದ ಮೇಲೆ ಮತ್ತು ವಾಸಿಯಾಗದ ಮಾನಸಿಕ ಅಸ್ವಸ್ಥತೆಯ ಇವೆರಡರ ಆಧಾರದ ಮೇಲೆ ಅರ್ಜಿಯನ್ನು ಸರಿಯಾಗಿ ಪುರಸ್ಕರಿಸಿದೆ ಮತ್ತು ಅಪೀಲನ್ನು

2. (2011) 12 ಎಸ್‌ಸಿಸಿ 1

3. ಎಂಎಫ್‌ಎ ಸಂಖ್ಯೆ. 8062/2004, ಡಿ.ಡಿ. 11.09.2009

ವಜಾಮಾಡಲು ತಕ್ಕುದಾಗಿದೆಯೆಂದು ನಿರ್ಣಯಿಸಿರುವುದು ಸೂಕ್ತವಾಗಿದೆಯೆಂದು ನಿವೇದಿಸಿದ್ದಾರೆ.

8. ಮೇಲಿನ ನಿವೇದನೆಗಳೊಂದಿಗೆ ಕೌಟುಂಬಿಕ ನ್ಯಾಯಾಲಯದ ಮುಂದೆ ಪಕ್ಷಕಾರರು ದಾಖಲೆಯಲ್ಲಿ ಇಟ್ಟ ಸಾಕ್ಷ್ಯವನ್ನು ಹಾಗೂ ಪ್ರಶ್ನಿತ ತೀರ್ಪನ್ನು ಅವಗಾಹಿಸಿದ ನಂತರ ಪಕ್ಷಕಾರರು 01.12.2011 ರಂದು ತಮ್ಮ ಸಂಪ್ರದಾಯದ ಪ್ರಕಾರ ವಿವಾಹವಾಗಿದ್ದರೆಂಬುದನ್ನು ಪ್ರಶ್ನಿತ ತೀರ್ಪು ಸಹ ಪ್ರಕಟಪಡಿಸುತ್ತದೆ. ಪತಿಯು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಅವನು ಮನೆಯನ್ನು ಬಾಡಿಗೆಗೆ ಇನ್ನೂ ಮಾಡದಿದ್ದುದರಿಂದ ಮತ್ತು ಬಳ್ಳಾರಿಯಲ್ಲಿ ಅವನ ಪೋಷಕರೊಂದಿಗೆ ಅವಳನ್ನು ಬಿಟ್ಟಿದ್ದುದರಿಂದ ಅವನು, ಬೆಂಗಳೂರಿಗೆ ಅವನೊಂದಿಗೆ ಕರೆದೊಯ್ಯಲು ಆಗಿರಲಿಲ್ಲ. ಆದಾಗ್ಯೂ, ಅವನು ತನ್ನ ಪೋಷಕರ ಗೃಹಕ್ಕೆ ಹೋಗುತ್ತಿದ್ದನು ಆದರೆ ಅವರೊಟ್ಟಿಗಿನ ಸಹಬಾಳ್ವೆ 04.04.2012 ರವರೆಗಿನ ಅಲ್ಪ ಕಾಲಾವಧಿಯಲ್ಲಿ ಜೀವನ ನಡೆಸಿದ್ದರು, ಇದಾದ ತರುವಾಯ, ಅವಳನ್ನು ಅವರ ತಂದೆ ತನ್ನ ಸ್ಥಳಕ್ಕೆ ಕರೆದೊಯ್ದಿದ್ದರು. ಅವಳು ಧ್ವನಿಯನ್ನು ಕೇಳಿಸಿಕೊಳ್ಳುತ್ತಿರುವ ಮತ್ತು ಸಂಶಯಾಸ್ಪದ ಭಾವನೆಯಿರುವ ಅವಳ ದೂರಿನ ಆಧಾರದ ಮೇಲೆ ಮತ್ತು ಶಿಜೋಫ್ರೇನಿಯಾ ನಮೂನೆಯ ಬುದ್ಧಿ ವಿಕಾರಕ್ಕೆ ಅವಳಿಗೆ ಚಿಕಿತ್ಸೆ ನೀಡಬೇಕೆನ್ನುವ ಸಂಬಂಧ 2002 ನೇ ವರ್ಷದಲ್ಲಿ ಚಿಕಿತ್ಸೆಗಾಗಿ ಪತ್ನಿಯನ್ನು ಕರೆದೊಯ್ಯಲಾಗಿತ್ತೆಂಬುದು ವೈದ್ಯ / ಪ್ರಾಸಾ–3 ರ ಸಾಕ್ಷ್ಯದಿಂದ ಸಹ ರುಜುವಾತಾಗಿರುತ್ತದೆ. ವೈದ್ಯಕೀಯ ಚಿಕಿತ್ಸೆಯ ನಂತರ, ಅವಳ ಸ್ಥಿತಿ ಸುಧಾರಿಸಿತ್ತು. 2005ನೇ ವರ್ಷದಲ್ಲಿ, ಅವಳಿಗೆ ಔಷಧಿಯನ್ನು ನಿಲ್ಲಿಸಿದಾಗ, ಅವಳ ಸಮಸ್ಯೆಗಳು ತೀವ್ರಗೊಂಡಿದ್ದವು, ಮತ್ತೆ ಅವಳಿಗೆ ವೈದ್ಯಕೀಯ ಚಿಕಿತ್ಸೆಯನ್ನು ಮುಂದುವರಿಸಲಾಯಿತು. ಅವಳ ವಿವಾಹದ ನಂತರವೂ ಕೂಡ, ದಾವಣಗೆರೆಯ ಜೆಜೆಎಂ ವೈದ್ಯಕೀಯ ಕಾಲೇಜಿನ ಮನೋವ್ಯಾಧಿ ಪ್ರಾಧ್ಯಾಪಕರಾದ ಪ್ರಾಸಾ–3 / ಡಾ|| ಸಿ.ವೈ. ಸುದರ್ಶನ್ ರವರಲ್ಲಿ ನಿಯತ ಚಿಕಿತ್ಸೆಯಲ್ಲಿದ್ದಳು. ಈ ನಡುವೆ, ಬಳ್ಳಾರಿಯಲ್ಲಿ ಖಾಸಗಿ ನರ, ಮನೋರೋಗ ವೈದ್ಯಕೀಯ ಪ್ರಾಕ್ಟೀಷನರ್ ಆಗಿರುವ ಪ್ರಾಸಾ–2 ಇವರು ಐದು ದಿನಗಳವರೆಗೆ ಅವಳನ್ನು ಒಳರೋಗಿಯಾಗಿ ಪರೀಕ್ಷಿಸಿದ್ದರು. ಅವಳ ಪತಿಯು ಅವಳನ್ನು ವರದಿಗಾಗಿ ಪ್ರಾಸಾ–2 ರ ಬಳಿಗೆ ಕರೆದೊಯ್ದಿದ್ದರು.

5 ದಿನಗಳ ವರೆಗಿನ ಪರೀಕ್ಷೆಯ ಸಂಬಂಧ ಅವಳನ್ನು ಇರಿಸಿದ್ದ ನಂತರವೂ ಕೂಡ ಇದು ದೀರ್ಘಕಾಲೀನ ಅವಧಿಯ ವೀಕ್ಷಣೆಯಲ್ಲಿಡಬೇಕಾಗಿರುವುದರಿಂದ ಮತ್ತು ದಂಪತಿಗಳಿಬ್ಬರನ್ನು ಪರೀಕ್ಷಿಸಬೇಕಾಗಿದ್ದರಿಂದ ವೈದ್ಯರು, ಅವಳ ಸ್ಥಿತಿಯ ನಿರ್ಣಾಯಕ ವರದಿಯನ್ನು ನೀಡಲು ಸಾಧ್ಯವಾಗಿರಲಿಲ್ಲ. ಪತಿಯು ತಾನಾಗಿಯೇ ಪರೀಕ್ಷೆಗೆ ಒಡ್ಡಿಕೊಂಡಿರಲಿಲ್ಲ. ಪ್ರಾಸಾ–3 ರ (2002 ನೇ ವರ್ಷದಿಂದ ಅವಳಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರು) ಸಾಕ್ಷ್ಯದ ಪ್ರಕಾರ ಅವಳು ಬಿಪೋಲರ್ ಅಫೆಕ್ಟಿವ್ ಡಿಸಾರ್ಡರ್ ಎಂದರೆ ಬಿಡಿಬಿಡಿಯಾಗಿ ಮನೋಸ್ಥಿತಿಯು ಕ್ಷೋಭೆಯಾಗಿರುತ್ತದೆ. ಖಿನ್ನ ಮನಸ್ಥಿತಿಯಲ್ಲಿರುವಾಗ, ಅವಳಿಗೆ ಹಲವು ಮತ್ತು ನಿದ್ದೆ ಕಡಿಮೆಯಿರುತ್ತದೆ. ಕಡಿಮೆ ಏಕಾಗ್ರತೆ ಮತ್ತು ಭಯಗ್ರಸ್ತಳಾಗಿರುತ್ತಾಳೆ; ಸಂತೋಷದಲ್ಲಿರುವಾಗ, ಅವಳಿಗೆ ಸ್ವಲ್ಪ ಕೋಪವಿರುತ್ತದೆ ಮತ್ತು ಅವಳ ವರ್ತನೆಯಲ್ಲಿ ಸಿಡುಕುತನವಿರುತ್ತದೆ. ಅವನ ಅಭಿಪ್ರಾಯದಲ್ಲಿ ಅವಳಿಗೆ ನಿಯತ ಪರೀಕ್ಷೆ ಮತ್ತು ನಿಯತ ಚಿಕಿತ್ಸೆ ಮಾಡಿಸಿದರೆ, ಕಾಯಿಲೆಯಿಂದ ಬಳಲುತ್ತಿರುವ ಅವಳನ್ನು ನಿಯಂತ್ರಿಸಬಹುದು, ಆದರೆ ಇದು ವಾಸಿಯಾಗಬಹುದಾದುದಲ್ಲವಾಗಿರುತ್ತದೆ.

9. ಅವಳ ಮನೋಸ್ಥಿತಿ ಪರೀಕ್ಷೆಯಾಧರಿಸಿ ದಿನಾಂಕ 01.04.2014 ರ ನಿಮ್ಹಾನ್ಸ್ ನೀಡಿದ ವರದಿಯ ಪ್ರಕಾರ ಅವಳು ಅಸಿಂಪ್ಟೊಮ್ಯಾಟಿಕ್ (asymptomatic) ಆಗಿರುವುದು ಕಂಡುಬಂದಿತ್ತು. ಅವಳಿಗೆ 'ಪ್ಯಾರಾನಾಯ್ಡ್ ಶಿಜೊಫ್ರೇನಿಯಾ' ರೋಗ ಪತ್ತೆಯಾಗಿತ್ತು. ಅವಳು ರೋಗಲಕ್ಷಣ ಮುಕ್ತಳಾಗಿದ್ದರೆ, ಅವಳನ್ನು ವೈವಾಹಿಕ ಜವಾಬ್ದಾರಿ ನಿರ್ವಹಿಸಲು ಸಾಧ್ಯವಾಗಬಹುದು. ಕಡೆಯಲ್ಲಿ, ಅವಳನ್ನು ಕಳೆದ ದಶಕದಿಂದ ನೋಡುತ್ತಿದ್ದುದರಿಂದ ಹೆಚ್ಚಿನ ಮಾಹಿತಿಯನ್ನು ನೀಡಲು ತುಂಬಾ ಯುಕ್ತ ವ್ಯಕ್ತಿಯಾಗಿರುವುದರಿಂದ ಅವಳಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯ, ದಾವಣಗೆರೆಯ ಮನೋವೈದ್ಯ ಪ್ರಾಸಾ–3 / ಡಾ॥ ಸಿ.ವೈ. ಸುದರ್ಶನ್ ರವರಿಗೆ ವರದಿಯನ್ನು ಕಳುಹಿಸಿದೆ.

10. ಈ ಅರ್ಜಿಯನ್ನು ಉಪ–ಪ್ರಕರಣಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸದೆ ಹಿಂದೂ ವಿವಾಹ ಅಧಿನಿಯಮದ 13ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದ್ದು, ಇದು, ವಿಚ್ಛೇದನಕ್ಕೆ ಸಂಬಂಧಿಸಿದ ವಿವಿಧ ಆಧಾರಗಳಿಗೆ ಸಂಬಂಧಪಡುತ್ತದೆ. ಆದಾಗ್ಯೂ, ಈ ಮುಂದಿನ ಆಧಾರಗಳ ಮೇಲೆ ವಾದವನ್ನು ರೂಪಿಸಲಾಗಿದೆ:

(1) ಕ್ರೌರ್ಯ;

(2) ವಾಸಿಮಾಡಲಾಗದ ಮಾನಸಿಕ ಅಸ್ವಸ್ಥತೆ ಮತ್ತು

(3) ಮುಖ್ಯ ಸಂಗತಿಯನ್ನು ಮರೆಮಾಚುವಿಕೆ.

ಸಂಪೂರ್ಣವಾಗಿ ಮುಗಿಸಿರುವ ವಿವಾಹವಾಗಿದ್ದಾಗ್ಯೂ, ಅಧಿನಿಯಮದ 13ನೇ ಪ್ರಕರಣದ ಮೇರೆಗೆ ವಿವಾಹವನ್ನು ವಿಘಟಿಸುವುದು ಪರಿಹಾರವಾಗುವುದರಿಂದ ಕೌಟುಂಬಿಕ ನ್ಯಾಯಾಲಯವು ಮೇಲಿನ ಮೊದಲ ಎರಡು ಬಾಬ್ತುಗಳಿಗೆ ಸಂಬಂಧಿಸಿದಂತೆ ಪರಿಶೀಲನಾಂಶಗಳನ್ನು ಎತ್ತಿದ್ದು, ಇವೆರಡರಲ್ಲೂ ಪತ್ನಿಯ ವಿರುದ್ಧ ಉತ್ತರ ನೀಡಿದೆ.

11. ವಿವಾಹವು 01.12.2011 ರಂದು ನೆರವೇರಿತ್ತು. ಮಧುಚಂದ್ರದ ಅಲ್ಪ ಪ್ರಯಾಣದ ನಂತರ ಪತಿಯು ಬೆಂಗಳೂರಿನಲ್ಲಿರುವ ಅವನ ಕೆಲಸಕ್ಕೆ ಹಿಂತಿರುಗಿದ್ದು ಬಳ್ಳಾರಿಯಲ್ಲಿ ತನ್ನ ಪೋಷಕರೊಂದಿಗೆ ಪತ್ನಿಯನ್ನು ಇರಿಸಿದ್ದಾನೆ. ವಾರಾಂತ್ಯಗಳ ಅವಧಿಯಲ್ಲಿ ಅವನ ಪತ್ನಿಯೊಂದಿಗೆ ಈ ಸೀಮಿತ ಸಹಬಾಳ್ವೆಯೊಂದಿಗೆ ಬೆಂಗಳೂರಿನಿಂದ ಬಳ್ಳಾರಿಗೆ ಓಡಾಡಿಕೊಂಡಿದ್ದು ಅವನು ತನ್ನ ಪತ್ನಿಯು ತೋರಿಸಿದ ಕ್ರೌರ್ಯದ ವರ್ತನೆಗಳೊಂದಿಗಿನ ಅವನ ಜಗಳದ ಕಥೆಯನ್ನು ತಂದಿದ್ದಾನೆ.

12. ''ಕ್ರೌರ್ಯತೆ'' ಎಂಬ ಪರಿಭಾಷೆಯನ್ನು ನಿರ್ದಿಷ್ಟವಾಗಿ, ವಿವಾಹದ ಪ್ರಕರಣಗಳಿಗೆ ಸಂಬಂಧಪಟ್ಟಂತೆ 'ಮಾನಸಿಕ ಕ್ರೌರ್ಯ' ಎಂಬುದನ್ನು, ***ನಾರಾಯಣ್ ಗಣೇಶ್ ದಸ್ತಾನೆ –ವಿರುದ್ಧ– ಸುಚೇತಾ ನಾರಾಯಣ್ ದಸ್ತಾನೆ***[4], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಬಹು ಪ್ರಾಧಾನ್ಯ ತೀರ್ಪು ಮೈಲಿಗಲ್ಲಾದಾಗಿನಿಂದಲೂ ನ್ಯಾಯಿಕ ಅರ್ಥವಿವರಣೆಯ ವಸ್ತುವಿಷಯವಾಗಿದೆ. ***ವಿ. ಭಗತ್ –ವಿರುದ್ಧ– ಡಿ. ಭಗತ್ (ಶ್ರೀಮತಿ)***[5], ಪ್ರಕರಣದಲ್ಲಿ, ಅಧಿನಿಯಮದ 13(1)(ಐಎ) ಪ್ರಕರಣದಲ್ಲಿ ಉದ್ದೇಶಿಸಲಾದಂಥ ''ಮಾನಸಿಕ ಕೌರ್ಯ'' ದ ಪರಿಭಾಷೆಯನ್ನು, ವಿಶಾಲಾರ್ಥದಲ್ಲಿ ಇದು ''ಇತರ ಪಕ್ಷಕಾರನ ಮೇಲೆ ಅಂಥ ಮಾನಸಿಕ ನೋವನ್ನುಂಟುಮಾಡುವ

4. ಎಐಆರ್ 1975 ಎಸ್‌ಸಿ 1534

5. (1994) 1 ಎಸ್‌ಸಿಸಿ 337

ಮತ್ತು ಇತರರೊಂದಿಗೆ ಜೀವಿಸಲು ಆ ಪಕ್ಷಕಾರನಿಗೆ ಸಾಧ್ಯವಿಲ್ಲವೆನ್ನುವ ಹಾಗೆ ಮಾಡಿರುವ ನಡತೆಯೆಂದು ಸ್ಥೂಲವಾಗಿ ಪರಿಭಾವಿಸಲಾಗಿದೆ. ಇದನ್ನು ವಿಭಿನ್ನವಾಗಿ ಇಡಲು, ಮಾನಸಿಕ ಕ್ರೌರ್ಯತೆಯು ಪಕ್ಷಕಾರರು, ಒಟ್ಟಿಗೆ ಬದಕಲು ಯುಕ್ತವಾಗಿ ನಿರೀಕ್ಷಿಸಲು ಸಾಧ್ಯವಾಗುದಿಲ್ಲವೆಂಬಂಥ ಸ್ವರೂಪವಾಗಿರಲೇಬೇಕು" ಎಂದು ಅಭಿಪ್ರಾಯಪಟ್ಟಿದೆ.

13. ***ಸಮರ್ ಘೋಷ್ –ವಿರುದ್ಧ– ಜಯ ಘೋಷ್***[6]ರ ತೀರ್ಪಿನಲ್ಲಿ 'ಕ್ರೌರ್ಯತೆ'ಯ ಪ್ರಕರಣಗಳನ್ನು ವ್ಯವಹರಿಸುವಲ್ಲಿ ಸಂಬಂಧಪಡಬಹುದಾದ ಮಾನವ ವರ್ತನೆಯ (i) ರಿಂದ (xiv) ವರೆಗಿನ ದೃಷ್ಟಾಂತಗಳನ್ನು ಪಟ್ಟಿಮಾಡಲಾಗಿದೆ. ದೃಷ್ಟಾಂತಗಳ ಪಟ್ಟಿಯನ್ನು ಪ್ರಾರಂಭಿಸುವ ಮೊದಲು ಇದು ಪೀಠಿಕೆಯಾಗಿದ್ದು, ಇವುಗಳು ಸಮಗ್ರವಾದವುಗಳಲ್ಲ ಆದರೆ ಅವುಗಳನ್ನು ಸಚಿತ್ರವಾಗಿ ವಿವರಿಸಲಾಗಿತ್ತು. ಈ ದೃಷ್ಟಾಂತಗಳ ಪೈಕಿ ಆಪಾದಿಸಲಾದ ಆ ದುರ್ನಡತೆಯು ದೀರ್ಘಕಾಲದವರೆಗೆ ಮುಂದುವರಿದಿರಲೇಬೇಕು ಎಂಬುದನ್ನು ಒಟ್ಟುಗೂಡಿಸಲು ಪ್ರಸ್ತುತ ಪ್ರಕರಣಕ್ಕೆ ಅಷ್ಟು ಸಾಕಾಗುತ್ತದೆ. ಚಿತ್ರಹಿಂಸೆ, ತೊಂದರೆ ಕೊಡಲು ಉದ್ದೇಶಿಸಲಾದ ನಿಂದನೆಯ ಕ್ರಮ ಮತ್ತು ಚಿತ್ರಹಿಂಸೆ ನೀಡುತ್ತಿರುವ ಅಥವಾ ಸಂಗಾತಿಯೊಂದಿಗೆ ಜೀವನ ನಡೆಸುವುದು ಅತ್ಯಂತ ಕಾಠಿಣ್ಯತೆಯನ್ನು ತಾಳಿಕೊಳ್ಳುವ ಕ್ರಮದ ಅಗತ್ಯವಾಗಿರುತ್ತದೆ. ಸರಿಯಲ್ಲದ ನಡತೆಯನ್ನು ಬೇರೆ ದಂಪತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ತೊಂದರೆಯಾಗುವ ಒಬ್ಬ ದಂಪತಿಯ ನಡವಳಿಕೆಯನ್ನು ಅಥವಾ ವಿಷಯವಾಗಿರುವ ಗಣನೀಯವಾಗಿರುವ ಮತ್ತು ಭಾರೀ ಮಹತ್ವದ್ದಾಗಿರುವ ಗ್ರಹಿಕೆಗೆ ಕಾರಣವಾಗುವುದನ್ನು ಸಮರ್ಥಿಸುವುದು ಅಗತ್ಯವಾಗಿದೆ. ಪ್ರಸಕ್ತ ಪ್ರಕರಣದಲ್ಲಿ, ಪತ್ನಿಯ ವಾಸಿಯಾಗದ ಮಾನಸಿಕ ಅಸ್ವಸ್ಥತೆಯ ಕಾರಣದಿಂದ ಆಗಿದೆಯೆಂದು ಪತಿಯು ಭಾವಿಸಿರುವುದರಿಂದ, ದಂಪತಿಯ ಸೀಮಿತ ಸಹಬಾಳ್ವೆಯ ಅವಧಿಯಲ್ಲಿ ಪ್ರತಿಫಲಿತವಾಗಿರುವ ಕ್ರೌರ್ಯದ ಆಪಾದಿತ ಕೃತ್ಯಗಳು, ಅಧಿನಿಯಮದ 13 (1)(iii) ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದ ವಿಚ್ಛೇದನದ ಆಧಾರವು ಸಂಪೂರ್ಣವಾಗಿ ಅದರ ಮೇಲೆಯೇ ಆಧಾರಿತವಾಗಿದೆ.

6. (2007) 4 ಎಸ್‌ಸಿಸಿ 511

14. ಪ್ರಾಸಾ–2 / ಡಾ॥ ಶ್ರೀನಿವಾಸ, ಇವರು ಬಳ್ಳಾರಿಯಲ್ಲಿ ನರ–ಮನೋವೈದ್ಯರಾಗಿದ್ದು, ಇವರ ಬಳಿ ಪತಿಯೇ ಖಿನ್ನತೆಯ ಸಂಬಂಧ ಚಿಕಿತ್ಸೆ ಪಡೆದುಕೊಂಡಿದ್ದರು. ಪತಿಯು ಯಾವುದೇ ಚಿಕಿತ್ಸೆಗಾಗಿ ಪತ್ನಿಯನ್ನು ಕರೆದೊಯ್ದಿರಲಿಲ್ಲ. ಆದರೆ ಅವಳ ಮಾನಸಿಕ ಸ್ಥಿತಿಯನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ಕರೆದೊಯ್ದಿದ್ದ. ಆ ಉದ್ದೇಶಕ್ಕಾಗಿ, ಅವಳು ಐದು ದಿನಗಳವರೆಗೆ ಒಳರೋಗಿಯಾಗಿ ಸೇರಿದ್ದಳು. ಆದರೆ ಅವಳು ಬಳಲುತ್ತಿದ್ದ ನಿರ್ದಿಷ್ಟ ಕಾಯಿಲೆಯ ನಿಜ ಸಂಗತಿಯನ್ನು ಕಂಡುಹಿಡಿಯಲು ಸಾಧ್ಯವಾಗಿರಲಿಲ್ಲ. ಮಾನಸಿಕ ಕಾಯಿಲೆಯ ಸ್ವರೂಪವನ್ನು ಪತ್ತೆಹಚ್ಚಲು ಅವನು ಪ್ರಮಾಣಮಾಡಿ ಹೇಳಿದ ಸಾಕ್ಷ್ಯದ ಪ್ರಕಾರ, ದೀರ್ಘಾವಧಿಯ ವೀಕ್ಷಣೆಯಲ್ಲಿಡುವುದು ಮತ್ತು ಅವರಿಬ್ಬರನ್ನು ಪರೀಕ್ಷಿಸುವುದು ಅಗತ್ಯವಾಗಿರುತ್ತದೆ. ಆದರೆ ಪತಿಯು ಪರೀಕ್ಷೆಗೆ ಒಳಗಾಗುವುದಕ್ಕೆ ಸಮ್ಮತಿಸಲಿಲ್ಲ. ಹೀಗಾಗಿ, ಈ ವೈದ್ಯರು ಯಾವುದೇ ನಿರ್ಣಯಕ್ಕೆ ಬರಲು ಸಾಧ್ಯವಾಗಿರಲಿಲ್ಲ.

15. ದಾವಣಗೆರೆಯ ಜೆಜೆಎಂ ಮೆಡಿಕಲ್ ಕಾಲೇಜಿನ ನರ–ಮನೋರೋಗ ಪ್ರಾಧ್ಯಾಪಕರಾದ ಪ್ರಾಸಾ–3/ ಡಾ॥ ಸಿ.ವೈ. ಸುದರ್ಶನ್‌ರವರು, 2002 ರಲ್ಲಿ ಮೊದಲ ಬಾರಿಗೆ ಚಿಕಿತ್ಸೆಗಾಗಿ ಅವರ ಬಳಿಗೆ ಅವಳನ್ನು ಕರೆತಂದಾಗಿನಿಂದಲೂ ಪತ್ನಿಯು ಬಳಲುತ್ತಿರುವ ಕಾಯಿಲೆಯ ಸ್ವರೂಪದ ಮಾಹಿತಿ ನೀಡಿದ್ದರು. ಅವಳ ರೋಗಲಕ್ಷಣಗಳು "ಧ್ವನಿಗಳನ್ನು ಆಲಿಸುವುದು" ಮತ್ತು "ಸಂದೇಹಾಸ್ಪದ ಭಾವನೆ" ಗಳಾಗಿದ್ದವು. ಡಿಸೆಂಬರ್ 2002 ರಲ್ಲಿ, ಔಷಧದ ಪ್ರಮಾಣವನ್ನು ಇಳಿಸಿದ್ದರಿಂದ ಅವಳ ರೋಗಲಕ್ಷಣಗಳು ಹೆಚ್ಚಾಗಿದ್ದವು. ಅವಳು ದುಃಖದಿಂದಿರುತ್ತಿದ್ದಳು, ಆಗಾಗ ಅಳುತ್ತಿದ್ದಳು ಮತ್ತು ಅವಳಿಗೆ ನಿದ್ರೆಯು ಕಡಿಮೆಯಾಗಿತ್ತು. ಔಷಧಗಳನ್ನು ಪುನಃಪ್ರಾರಂಭಿಸಿದ ನಂತರ ಅವಳು ಸುಧಾರಿಸಿದ್ದಳು. ಮತ್ತೆ 2005ರ ಮಾರ್ಚ್ ಅವಧಿಯಲ್ಲಿ ಅವಳಿಗೆ ಔಷಧವನ್ನು ನಿಲ್ಲಿಸಿದಾಗ, ರೋಗಲಕ್ಷಣಗಳು ಪುನರಾವರ್ತಿತವಾಗಿದ್ದವು. ಪುನಃ ಚಿಕಿತ್ಸೆಯಿಂದ ಅವಳು ಚೇತರಿಸಿಕೊಂಡಿದ್ದಳು. 2006ರ ಸೆಪ್ಟೆಂಬರ್‌ನಲ್ಲಿ, ರೋಗ ಲಕ್ಷಣಗಳು ಸ್ವಲ್ಪ ಹೆಚ್ಚಾದ ಕಾರಣದಿಂದ ಔಷಧವನ್ನು ಮರು ಹೊಂದಾಣಿಕೆ ಮಾಡಲಾಗಿತ್ತು. ಅವಳ ರೋಗಲಕ್ಷಣಗಳ ಅವಧಿಯಲ್ಲಿ, ಅವಳು ತನ್ನ ಅನುಭವವನ್ನು ಇತರರೊಂದಿಗೆ ವಿಶ್ವಾಸದಿಂದ ಹೇಳುತ್ತಿದ್ದಳು. ಅವಳ ವರ್ತನೆಯು ಇತರರಿಗೆ ಅಡಚಣೆಯುಂಟುಮಾಡುತ್ತಿರಲಿಲ್ಲ.

ಅವನ ಹೇಳಿಕೆ, ''.......................... ಎದುರುದಾರರು ಹೊಂದಿರುವ ಈ ಅನಾರೋಗ್ಯವನ್ನು ನಿಯತ ಚಿಕಿತ್ಸೆ ಮೂಲಕ ಮಾತ್ರ ನಿಯಂತ್ರಿಸಬಹುದಾಗಿದೆ. ಎದುರುದಾರರು ಬಳಲುತ್ತಿರುವ ಈ ಕಾಯಿಲೆಯು ವಾಸಿಯಾಗದ್ದು.'' ನ್ಯಾಯಾಲಯದ ವಿವೇಚನೆಯಲ್ಲಿ ಬೇರೆ ಯಾವುದಕ್ಕಿಂತಲೂ ಇದು ಪ್ರಧಾನವಾಗಿದ್ದ ವಿವಾಹವನ್ನು ವಿಘಟಿಸುವಲ್ಲಿ ನಿರ್ಣಾಯಕ ಪಾತ್ರವನ್ನು ಸಹಾ ವಹಿಸಿದೆ. ನಿಮ್ಹಾನ್ಸ್‌ನಲ್ಲಿ ಅವಳ ಮಾನಸಿಕ ಸ್ಥಿತಿಯನ್ನು ಮೌಲ್ಯಮಾಪನ ಮಾಡುವ ಸಂಬಂಧ ಕಳುಹಿಸಲು ಪತಿಯು ಅರ್ಜಿಯನ್ನು ಸಲ್ಲಿಸಿದ್ದ ಮೇಲೆ ಪತ್ನಿಯು ಮೌಲ್ಯಮಾಪನ ಮಾಡುವುದಕ್ಕಾಗಿ ಸ್ವಯಂ ಆಗಿ ಸಲ್ಲಿಸಿದ್ದು ಅವಳಿಗೆ ಯಾವುದೇ ರೋಗಲಕ್ಷಣಗಳು ಕಂಡುಬಂದಿರುವುದಿಲ್ಲ.

16. ನಮ್ಮ ಪರಿಗಣನೆಗಾಗಿ ಈಗಿರುವ ಪ್ರಶ್ನೆಯೇನೆಂದರೆ, ''ಅಧಿನಿಯಮದ 13(1)(ii)ನೇ ಪ್ರಕರಣದ ಮೇರೆಗೆ ಮೊಕದ್ದಮೆಯನ್ನು ಹೂಡಲು ಸಾಕ್ಷ್ಯಹೇಳಲಾದ ಪ್ರಾಸಾ-3 ರ ಸಾಕ್ಷ್ಯವು ಮೇಲಿನ ಸಾಕ್ಷ್ಯವು ಸಾಕಷ್ಟಾಗಿದೆಯೇ?'' ಎಂಬುದಾಗಿದ್ದು, ಹಿಂದಿನ ಚರ್ಚೆಯ ಸಂಬಂಧ ಇದಕ್ಕೆ ನಮ್ಮ ದೃಢ ಉತ್ತರ, ''ಇಲ್ಲ'' ಎಂಬುದಾಗಿದೆ.

17. ಅದೃಷ್ಟವಶಾತ್, ಪತ್ನಿಯ ಸಂಬಂಧದಲ್ಲಿ ಶೀಜೋಫ್ರೇನಿಕ್ ಸ್ಥಿತಿಯಲ್ಲಿರುವ ಪ್ರವರ್ಗದೊಳಗೆ ಅವಳು ಬರುತ್ತಿದ್ದು, ಇದನ್ನು ನಿಯತ ವೈದ್ಯಕೀಯ ಔಷಧಗಳ ಮೂಲಕ ನಿಯಂತ್ರಣದಲ್ಲಿ ಇಡಬಹುದಾಗಿದೆ. ಅವಳ ಸ್ಥಿತಿಯು ''ನಿಯಂತ್ರಣದಲ್ಲಿ ಇಡಬಹುದಾಗಿದೆ''. ಅವಳ ಸ್ಥಿತಿಯು ''ನಿಯಂತ್ರಿಸಲಾಗದ ಸಂದರ್ಭ'' ವೇನಲ್ಲ. ಅವಳ ರೋಗಲಕ್ಷಣಗಳ ಅವಧಿಯಲ್ಲೂ ಸಹ ಅವಳು ವ್ಯಗ್ರಳಾಗಿಲ್ಲ ಅಥವಾ ಅಪರಾಧಿಕವಲ್ಲ ಅಥವಾ ಉಪದ್ರವಕಾರಿಯೂ ಆಗಿಲ್ಲ.

18. ***ರಾಮನಾರಾಯಣ ಗುಪ್ತ -ವಿರುದ್ಧ- ರಾಮೇಶ್ವರಿ ಗುಪ್ತ***[8], ಸರ್ವೋಚ್ಚ ನ್ಯಾಯಾಲಯವು, ವಿವಾಹದ ವಿಘಟನೆಗೆ ದೊರಕುವ ಆಧಾರಗಳಾದ ಮಾನಸಿಕ ಅಸ್ವಸ್ಥತೆ ಅಥವಾ ಸರಿಯಾಗಿಲ್ಲದಿರುವ ಮನಸ್ಸಿನ ಸ್ಥಿತಿಗೆ ಸಂಬಂಧಿಸಿದ ಕಾನೂನಿನಲ್ಲಿ

8. (1988) 4 ಎಸ್‌ಸಿಸಿ 247

ವಿಧಿಸಲಾದ ಅಧಿನಿಯಮದ 13(1)(iii)ನೇ ಪ್ರಕರಣದ ಉಪಬಂಧವನ್ನು ವ್ಯಾಖ್ಯಾನಿಸಿದೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಪ್ಯಾರಾ–20 ಮತ್ತು 33 ನ್ನು ಹೀಗೆ ಓದಲಾಗಿದೆ:

> *"20. ವಿವಾಹದ ವಿಘಟನೆಗೆ ಕಾರಣವಾದ ಆಧಾರಗಳೆಂದು ಪ್ರಕರಣದಲ್ಲಿ, ಯಾವ ಅರ್ಥದಲ್ಲಿ 'ಮನಸ್ಸು' ಮತ್ತು 'ಮಾನಸಿಕ ಅಸ್ವಸ್ಥತೆಯು' ಆಗಿದೆಯೆಂದು ಭಾವಿಸಲಾಗಿದೆಯೋ ಅವುಗಳನ್ನು 'ಮಾನಸಿಕ ಅಸ್ವಸ್ಥತೆ' ಯ ಪ್ರಮಾಣವನ್ನು ನಿರ್ಧರಿಸುವುದು ಅಗತ್ಯ. ದಂಪತಿಯು, ಇತರರೊಂದಿಗೆ ಬದುಕಲು ದಂಪತಿ ಕೋರಿರುವುದನ್ನು ಯುಕ್ತವಾಗಿ ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಎಲ್ಲಾ ಮಾನಸಿಕ ಅಸ್ವಸ್ಥತೆಗಳನ್ನು ಡಿಕ್ರಿಯುನ್ನು ನೀಡುವ ಆಧಾರಗಳೆಂದು ಗುರುತಿಸಲಾಗುವುದಿಲ್ಲ. ಎಲ್ಲಾ ಮಾನಸಿಕ ಅಸ್ವಸ್ಥತೆಗಳನ್ನು ಡಿಕ್ರಿಯನ್ನು ನೀಡುವುದಕ್ಕೆ ಸಂಬಂಧಿಸಿದ ಆಧಾರಗಳೆಂದು ಗುರುತಿಸಲಾಗಿಲ್ಲ. ಮಾನಸಿಕ ಅಸ್ವಸ್ಥತೆಯ ಯಾವುದೇ ಪ್ರಮಾಣದ ಅಸ್ತಿತ್ವದ ಮಾತ್ರದಿಂದಲೇ ವಿವಾಹವನ್ನು ವಿಘಟಿಸುವುದನ್ನು ಸಮರ್ಥಿಸಬಹುದಾದರೆ ಕೆಲವು ವಿವಾಹಗಳು ವಾಸ್ತವವಾಗಿದ್ದು ಕಾನೂನಿನಲ್ಲಿ ಉಳಿಯುತ್ತವೆ.*
>
> * * * * * *
>
> *33. ಶೂನ್ಯವಾದ ಮತ್ತು ಕುಟುಂಬದಲ್ಲಿ ನಕಾರಾತ್ಮಕ ಘಟಕವಾಗಿರುವ ಮಾನವತೆಯನ್ನು ಸಿದ್ಧವಾಗಿ ತುಂಬಾ ಇಳಿಸುವ ವಿರುದ್ಧದ ಈ ವೈದ್ಯಕೀಯ ಕಾಳಜಿಯು ಸಹ ಕಾನೂನಿಗೆ ಸಂಬಂಧಪಡುತ್ತದೆ ಮತ್ತು ಕಡೇ ಪಕ್ಷ, 13(1)(iii) ನೇ ಪ್ರಕರಣದ ಅಗತ್ಯತೆಗಳಲ್ಲಿ ಭಾಗಶಃವಾಗಿ ಪ್ರತಿಫಲನವಾಗುತ್ತದೆ. ಕೊನೆಯ ವಿಶ್ಲೇಷಣೆಯಲ್ಲಿ, ಶಿಜೊಫ್ರೇನಿಕ್ ಎಂದು ವ್ಯಕ್ತಿಯನ್ನು ಗುರುತಿಸಿದ ಮಾತ್ರದಿಂದಲೇ ಇದು ಸಾಕಾಗುವುದಿಲ್ಲ. 13(1)(iii) ನೇ ಪ್ರಕರಣದ ಉದ್ದೇಶಗಳಿಗಾಗಿ 'ಶಿಜೊಫ್ರೇನಿಯಾ' ಎಂಬುದು ಯಾವ ಬಗೆಯ ಶಿಜೊಫ್ರೇನಿಯ, ಅದು ಏನನ್ನು ಮಾಡುತ್ತದೆಯೇ ಎಂಬುದಾಗಿದೆ".*

19. ***ಪ್ರಮಥ ಕುಮಾರ್ ಮೈಟಿ –ವಿರುದ್ಧ– ಆಶಿಮಾ ಮೈಟಿ*** [9], ಕಲ್ಕತ್ತಾದ ಉಚ್ಚನ್ಯಾಯಾಲಯ ನ್ಯಾಯಸ್ಥಾನವು ಅಭಿಪ್ರಾಯಪಟ್ಟಿರುವಂತೆ ಪತ್ನಿಯ ಮಾನಸಿಕ ಅಸ್ವಸ್ಥತೆ ವಿಚ್ಛೇದನದ ಡಿಕ್ರಿ ವಾರಂಟಿನ ಮೂಲಕವೇ ರುಜುವಾತಾಗದಿದ್ದರೂ ಪತಿಯು ಪತ್ನಿಯೊಂದಿಗೆ ಬದುಕುವುದನ್ನು ನಿರೀಕ್ಷಿಸದಿರುವಂಥ ಸ್ವರೂಪದ್ದಾಗಿದೆಯೆಂದು ಮತ್ತೆ ರುಜುವಾತುಪಡಿಸಲೇಬೇಕಾಗುತ್ತದೆ.

20. ***ಎಂಟಿ. ಟಿಟ್ಲಿ –ವಿರುದ್ಧ– ಆಲ್‌ಫ್ರೆಡ್ ರಾಬರ್ಟ್ ಜೋನ್ಸ್*** [10], ಪ್ರಕರಣದಲ್ಲಿ, ಪತ್ನಿಯು ತನ್ನ ಹೆಚ್ಚಿನ ಶಿಕ್ಷಣವನ್ನು ಮುಂದುವರಿಸುತ್ತಿದ್ದು ಅಡುಗೆ ಮಾಡಿಕೊಂಡು ಮಕ್ಕಳನ್ನು ನೋಡಿಕೊಳ್ಳುತ್ತಿರುವುದನ್ನು ಗಮನಿಸಿದ ನಂತರ, ಅಲಹಾಬಾದ್ ಉಚ್ಚ ನ್ಯಾಯಾಲಯವು, ಪತಿಯು, ತನ್ನ ಜೀವನ ಅಥವ ಅವನ ಮಕ್ಕಳ ಜೀವನಕ್ಕೆ ಅಪಾಯವಿದೆಯೆಂದು ಗ್ರಹಿಸಿದ್ದರಲ್ಲಿ ಯಾವುದೇ ಸತ್ವ ಇಲ್ಲವೆಂದು ತೀರ್ಮಾನಿಸಿದೆ. ***'ಕೊಲ್ಲಂ ಚಂದ್ರಶೇಖರ್'*** ರವರ ಪ್ರಕರಣದಲ್ಲಿ (ಮೇಲಿನ) ಎದುರುದಾರ/ಪತ್ನಿಯು ಎಂಬಿಬಿಎಸ್ ಪದವಿಯನ್ನು ಮತ್ತು ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಸರ್ಕಾರಿ ವೈದ್ಯಕೀಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಳೆಂಬುದನ್ನು ಗಮನಿಸಿದ ನಂತರ, ಅವಳು ಗಂಭೀರ ಸ್ವರೂಪದ ಮಾನಸಿಕ ಅಸ್ವಸ್ಥತೆ / ತೀಕ್ಷ್ಣ ರೀತಿಯ ಶಿಜೊಫ್ರೇನಿಯಾದಿಂದ ಬಳಲುತ್ತಿದ್ದರೆ, ಆ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲವೆಂದು ಅಭಿಪ್ರಾಯಪಟ್ಟಿದೆ.

21. ***ಪಂಕಜ್ ಮಹಾಜನ್***ರವರ ಪ್ರಕರಣದಲ್ಲಿ (ಮೇಲಿನ) ಪತಿಯು ನಂಬಿಕೆ ಇಟ್ಟುಕೊಂಡಿದ್ದು, ಪತ್ನಿಯ ಮಾನಸಿಕ ಅಸ್ವಸ್ಥತೆಯ ದೂರಿನ ಮೂಲಕ ಸಂಗತಿಗಳನ್ನಾಧರಿಸಿ ಪ್ರಸ್ತುತ ಪ್ರಕರಣದ ಬೇಧ ತೋರಿಸಲಾಗಿದೆ. ಪತಿಯ ಮೇಲೆ ಪತ್ನಿಯು ಉಂಟುಮಾಡಿದ ಕ್ರೌರ್ಯತೆಯ ನಿರಂತರ ಮತ್ತು ಗಂಭೀರ ಕೃತ್ಯಗಳ ಕುರಿತು ನ್ಯಾಯಾಲಯದ ಮುಂದೆ ವಿಪುಲ ಸಾಕ್ಷ್ಯವಿದ್ದವು. ಅವರು ಸುಮಾರು 10 ತಿಂಗಳುಗಳ ಕಾಲ ಒಂದೇ ಸೂರಿನಡಿಯಲ್ಲಿ ಒಟ್ಟಿಗೆ ಬದುಕಿದ್ದಾರೆ.

9. ಎಐಆರ್ 1991 ಕಲ್ಕತ್ತಾ 123
10. ಎಐಆರ್ 1934 ಅಲಹಾಬಾದ್ 273

ಇದರ ಮುಂದಿರುವ ಪಟ್ಟಿಯಿಂದ, ಪತ್ನಿಯು "ಮಾನಸಿಕ ಅಸ್ವಸ್ಥತೆ" ಯಿಂದ ಬಳಲುತ್ತಿದ್ದಳೆಂದು ಮತ್ತು ಅವಳ ಕೃತ್ಯಗಳು ಮತ್ತು ನಡೆತೆಯಿಂದ ಅವಳು ಅವನಿಗೆ ಗಂಭೀರ ಮಾನಸಿಕ ಕ್ರೌರ್ಯತೆಯನ್ನುಂಟುಮಾಡಿದ್ದಳು, ಒಬ್ಬರೊಬ್ಬರು ಒಟ್ಟಿಗೆ ಬದುಕಲು ಪಕ್ಷಕಾರರಿಗೆ ಅಸಾಧ್ಯವಾಗಿತ್ತು ಎಂಬುದು ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾಗಿತ್ತು. ಆದರೆ, ನಮ್ಮ ಮುಂದಿದ್ದ ಪಕ್ಷಕಾರರು ಒಟ್ಟಿಗೆ ವಾಸಿಸುವ ಮೊದಲೂ ಸಹ ಸ್ವಲ್ಪ ಕಾಲ ಪ್ರತ್ಯೇಕವಾಗಿದ್ದು ದೀರ್ಘಕಾಲದ ಅವಧಿಗೆ ಮಾನಸಿಕ ಅಸ್ವಸ್ಥತೆಗಾಗಿ ಚಿಕಿತ್ಸೆಯಲ್ಲಿದ್ದ ಸಂಗತಿಯಾಗಿದ್ದು ದೋಷಿಯು ವೈವಾಹಿಕ ಜೀವನ ನಡೆಸಲು ಪ್ರಯತ್ನಮಾಡಿದ್ದರು. ದಿನಾಂಕ 01.02.2013 ರ ನಿಮ್ಹಾನ್ಸ್‌ನ ನಿಶಾನೆ ಪಿ.13/ಕೇಸ್ ಸಾರಾಂಶದ ಪ್ರಕಾರ, ಅವಳು ಯಾವುದೇ ಮನೋರೋಗ ಲಕ್ಷಣ / ಮನಸ್ಥಿತಿ ಲಕ್ಷಣವನ್ನು ಹೊಂದಿರಲಿಲ್ಲ. ನಿಮ್ಹಾನ್ಸ್‌ನ ಮನೋವೈದ್ಯ ಪ್ರಾಧ್ಯಾಪಕರಾದ ಡಾ॥ ವೈ.ಸಿ. ಜನಾರ್ಧನ ರೆಡ್ಡಿಯವರು ಕಳಿಸಿದ ಪತ್ರ ದಿನಾಂಕ 01.04.2014 ರ ಸಂಬಂಧಪಟ್ಟ ಭಾಗವನ್ನು ಕೌಟುಂಬಿಕ ನ್ಯಾಯಾಲಯಕ್ಕೆ ಈ ಮುಂದಿನಂತೆ ಓದಲಾಗಿದೆ:

> *"ಮಾನಸಿಕ ಸ್ಥಿತಿ ಪರೀಕ್ಷೆ ಸಂಬಂಧ, ಅವಳಲ್ಲಿ ಯಾವುವೇ ರೋಗಲಕ್ಷಣಗಳಿಲ್ಲ. ರೋಗಪತ್ತೆಯನುಸಾರ ಅವಳಿಗಿದ್ದದ್ದು ಪ್ಯಾರ್‌ನಾಯ್ಡ್ ಶಿಜೊಫ್ರೇನಿಯ. ಪದೇ ಪದೇ ಮರುಕಳಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವಳು ಅನಿಶ್ಚಿತವಾಗಿ ವೈದ್ಯಕೀಯ ಔಷಧವನ್ನು ತೆಗೆದುಕೊಳ್ಳಬೇಕಾಗಿತ್ತು. ಜೀವನಪರ್ಯಂತವೂ ತೆಗೆದುಕೊಳ್ಳಬೇಕಾಗಬಹುದು. ಅವಳು ರೋಗಲಕ್ಷಣ ಮುಕ್ತಳಾಗಿದ್ದರೆ, ಅವಳು ವೈವಾಹಿಕ ಜವಾಬ್ದಾರಿಗಳನ್ನು ನಿರ್ವಹಿಸಲು ಸಮರ್ಥಳಾಗಬಹುದು. ನಿಯತ ಔಷಧ ಮತ್ತು ಬೆಂಬಲಯುತ ಕೌಟುಂಬಿಕ ವಾತಾವರಣದಿಂದ, ಮರುಕಳಿಸುವ ಅಪಾಯವನ್ನು ಗಣನೀಯವಾಗಿ ಇಳಿಸಬಹುದು, ಆದರೆ ನಿಯತ ವೈದ್ಯಕೀಯ ಔಷಧಿ ನೀಡುತ್ತಿದ್ದರೆ ಅವಳಿಗೆ ಅದು ಎಂದೂ ಮರುಕಳಿಸುವುದೇ ಇಲ್ಲ ಎಂದು ಖಾತರಿ ನೀಡಲಾಗುವುದಿಲ್ಲ.*

22. ಪತ್ನಿಯ ವಿರುದ್ಧ ಆಪಾದಿಸಲಾದ ಕ್ರೌರ್ಯ ಕೃತ್ಯಗಳನ್ನು ಕಾನೂನಿನ ಕಣ್ಣಿನಲ್ಲಿ ಕ್ರೌರ್ಯವೆಂದು ನಿರೂಪಿಸಲಾಗದಿರುವುದರಿಂದ (ನಮ್ಮ ಮೇಲಿನ ಚರ್ಚೆಗಳಿಗಾಗಿ) ಶಿಜೋಫ್ರೇನಿಕ್ ರೋಗಲಕ್ಷಣಗಳು ಮರುಕಳಿಸುವ ಸಾಧ್ಯತೆಯ ಮೇಲೆ ವಿಚ್ಛೇದನ ಡಿಕ್ರಿಯನ್ನು ಹೇಗೆ ಸಮರ್ಥಿಸುವುದು?

23. ಹಿಂದಿನ ಕಂಡಿಕೆಗಳಲ್ಲಿ ಮಾಡಲಾದ ಚರ್ಚೆಯನ್ನು ಸ್ವಲ್ಪಹೊತ್ತು ಹಿಂದಕ್ಕೆ ಇಟ್ಟು ಅಧಿನಿಯಮದ 13(1)(iii)ನೇ ಪ್ರಕರಣಕ್ಕೆ ಹೋಗಿ ಇದನ್ನು ಹೀಗೆ ಓದೋಣ:

> "**13 ವಿಚ್ಛೇದನ.**– (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಅನುಷ್ಠಾಪಿತವಾದ ಯಾವುದೇ ವಿವಾಹವನ್ನು ಗಂಡನು ಅಥವಾ ಹೆಂಡತಿಯು ಸಲ್ಲಿಸಿದ ಅರ್ಜಿಯ ಮೇಲೆ, ವಿವಾಹದ ಇತರ ಪಕ್ಷಕಾರನು/ಳು,–
>
> (i) ವಿವಾಹವು ಅನುಷ್ಠಾಪಿತವಾದ ತರುವಾಯ, ತನ್ನ ಹೆಂಡತಿ ಅಥವಾ ಗಂಡನಲ್ಲದ ಅನ್ಯ ವ್ಯಕ್ತಿಯೊಂದಿಗೆ ಸ್ವಯಿಚ್ಛೆಯಿಂದ ಲೈಂಗಿಕ ಸಂಭೋಗ ಮಾಡಿರುವ; ಅಥವಾ
>
> (ii) ವಿವಾಹವು ಅನುಷ್ಠಾಪಿತವಾದ ತರುವಾಯ, ಅರ್ಜಿದಾರನೊಡನೆ/ಳೊಡನೆ ಕ್ರೂರವಾಗಿ ವರ್ತಿಸುವ; ಅಥವಾ
>
> (iii) ಅರ್ಜಿಯನ್ನು ಸಲ್ಲಿಸಿದ ನಿಕಟಪೂರ್ವದ ಎರಡು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಕಾಲ ನಿರಂತರವಾಗಿ ಅರ್ಜಿದಾರನನ್ನು/ಳನ್ನು ತ್ಯಜಿಸಿರುವ; ಅಥವಾ
>
> (iv) ಮತಾಂತರದಿಂದ ಹಿಂದೂ ಆಗಿರುವುದು ಕೊನೆಗೊಂಡಿರುವ; ಅಥವಾ

(v) ಗುಣಪಡಿಸಲಾಗದ ಅಸ್ವಸ್ಥ ಚಿತ್ತದಿಂದಿರುವ, ಅಥವಾ ಅರ್ಜಿದಾರನು/ಳು ಪ್ರತಿ ಅರ್ಜಿದಾರನೊಂದಿಗೆ/ಳೊಂದಿಗೆ ಜೀವನ ನಡೆಸಬಹುದೆಂದು ನಿರೀಕ್ಷಿಸಲಾಗದಂಥ ರೀತಿಯ ಮತ್ತು ಅಷ್ಟರಮಟ್ಟಿಗಿನ ಮಾನಸಿಕ ಅಸ್ತವ್ಯಸ್ತತೆಯಿಂದ ನಿರಂತರವಾಗಿ ಅಥವಾ ಆಗಾಗ್ಗೆ ಬಳಲುತ್ತಿರುವ;

ವಿವರಣೆ.- ಈ ಖಂಡದಲ್ಲಿ,-

(ಎ) "ಮಾನಸಿಕ ಅಸ್ತವ್ಯಸ್ತತೆ" ಎಂದರೆ, ಮಾನಸಿಕ ಅನಾರೋಗ್ಯ, ಮನಸ್ಸಿನ ನಿಧಾನ ಬೆಳವಣಿಗೆ ಅಥವಾ ಅಪೂರ್ಣ ಬೆಳವಣಿಗೆ, ಅಸ್ಥಿಮಿತ ಬುದ್ಧಿ ಅಥವಾ ಮನಸ್ಸಿನ ಇತರ ಯಾವುದೇ ಅಸ್ತವ್ಯಸ್ತತೆ ಅಥವಾ ದೌರ್ಬಲ್ಯ ಮತ್ತು ಇದು ಮತಿಭ್ರಮಣೆಯನ್ನು ಒಳಗೊಳ್ಳುತ್ತದೆ;

(ಬಿ) "ಅಸ್ಥಿಮಿತ ಬುದ್ಧಿ" ಎಂದರೆ, (ಸಾಮಾನ್ಯ ಮಟ್ಟಕ್ಕಿಂತ ಕಡಿಮೆ ಬುದ್ಧಿಯನ್ನು ಒಳಗೊಂಡಿರಲಿ ಇಲ್ಲದಿರಲಿ) ಇತರ ಪಕ್ಷವು ಅಸಾಮಾನ್ಯವಾಗಿ ಆಕ್ರಮಣಕಾರಿ ಅಥವಾ ತೀವ್ರ ಹೊಣೆಗೇಡಿಯಾಗುವಂತೆ ಮಾಡುವ ಮತ್ತು ವೈದ್ಯಕೀಯ ಚಿಕಿತ್ಸೆಯು ಅವಶ್ಯಕತೆಯಿರುವ ಅಥವಾ ಇಲ್ಲದಿರುವ ಅಥವಾ ವೈದ್ಯಕೀಯ ಚಿಕಿತ್ಸೆಗೆ ಒಳಪಡುವ ಅಥವಾ ಒಳಪಡದಿರುವ ಮನಸ್ಸಿನ ನಿರಂತರ ಅಸ್ತವ್ಯಸ್ತತೆಯನ್ನು ಅಥವಾ ದೌರ್ಬಲ್ಯವನ್ನು ಒಳಗೊಳ್ಳುತ್ತದೆ; ಅಥವಾ

ಹಾಗಾಗಿ ವಿಚ್ಛೇದನಕ್ಕಾಗಿನ ಆಧಾರವನ್ನು ನಿರೂಪಿಸಲು ಎರಡು ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆಂದು ಶಾಸನವು ತಿಳಿಸುತ್ತದೆ:– (ಎ) ವಾಸಿಪಡಿಸಲಾಗದ ಅನಾರೋಗ್ಯ ಮನಸ್ಥಿತಿ (ಪ್ರಸ್ತುತ ಪ್ರಕರಣದಲ್ಲಿ, ಶಿಜೊಫ್ರೇನಿಯಾ) ಮತ್ತು (ಬಿ) ಅರ್ಜಿದಾರನು ಅವಳೊಂದಿಗೆ ಬದುಕುವುದನ್ನು ಯುಕ್ತವಾಗಿ ಊಹಿಸಲೂ ಸಾಧ್ಯವಾಗದಿರುವಷ್ಟು ಮಟ್ಟಿಗೆ ಇರುವಿಕೆ. ನ್ಯಾಯಾಲಯಕ್ಕೆ

ತಂದಿರುವ ಈ ಪ್ರಕರಣದಲ್ಲಿ ಈ ಎರಡೂ ಸಂಗತಿಗಳು ಕಾಣೆಯಾಗಿವೆ. ಅವಳ ಶಿಜೊಫ್ರೇನಿಯಾ ಸ್ಥಿತಿಯು, ಉಪಶಮನದಲ್ಲಿಡುವುಂಥದ್ದಾಗಿದೆ. ಸಂಬಂಧ ಬೆಳೆಸಿಕೊಳ್ಳುವಲ್ಲಿ ಮತ್ತು ಒಂದಾಗಲು, ಉಸಿರಾಡುವುದಕ್ಕೂ ಸಮಯ ನೀಡದೆ, ಪತಿಯು ಆತುರಾತುರವಾಗಿ ನ್ಯಾಯಾಲಯದ ಮೆಟ್ಟಿಲೇರಿರುತ್ತಾರೆ.

24. ಈ ಹಂತದಲ್ಲಿ, 1928ರ ಜೂನ್ 23 ರಂದು ಜನಿಸಿದ ಅಮೇರಿಕನ್ ಗಣಿತಜ್ಞ ಜಾನ್ ಫೋರ್ಬಸ್ ನಾಶ್ ಜ್ಯೂನಿಯರ್ ರವರ 'ಎ ಬ್ಯೂಟಿಫುಲ್ ಮೈಂಡ್' (ಸೈಮನ್ ಮತ್ತು ಷಸ್ಟರ್ ಪ್ರಕಟಿತ ಮತ್ತು ಅದೇ ಹೆಸರಿನ ಚಲನಚಿತ್ರ) ಜೀವನ ಚರಿತ್ರೆಯಲ್ಲಿ ಸಿಲ್ವಿಯಾ ನಾಸರ್‌ರವರು ಚಿತ್ರಿಸಿದ ಯಶಸ್ವಿ ಕಥೆಯನ್ನು ನೆನಪಿಸಿಕೊಳ್ಳಬಹುದಾಗಿದೆ. ಅವನು ಮಾನಸಿಕ ಅನಾರೋಗ್ಯದ ರೋಗಲಕ್ಷಣಗಳನ್ನು ತೋರಿಸಲು ಆರಂಭಿಸಿದ್ದು, ಮನೋರೋಗ ಆಸ್ಪತ್ರೆಗಳಲ್ಲಿ ಹಲವಾರು ವರ್ಷಗಳನ್ನು ಕಳೆದಿದ್ದು ಪ್ಯಾರಾನಾಯ್ಡ್ ಶಿಜೋಫ್ರೇನಿಯಾಗೆ ಚಿಕಿತ್ಸೆ ಪಡೆದುಕೊಂಡಿರುತ್ತಾನೆ. 1970 ರ ನಂತರ ಅವನು ಹೆಚ್ಚಿನ ವೈದ್ಯಕೀಯ ಔಷಧೋಪಚಾರವನ್ನು ನಿರಾಕರಿಸಿರುತ್ತಾನೆ ಅವನ ಸ್ಥಿತಿ ಸುಧಾರಿಸುತ್ತದೆ. ಅವನು ಮತ್ತೊಂದೂ ಆಸ್ಪತ್ರೆಗೆ ಬರಲು ಒಪ್ಪಿಕೊಂಡಿರಲಿಲ್ಲ. ಅವನು 2001 ರಲ್ಲಿ ಮರುಮದುವೆಯಾದ ಅವನ ವಿಚ್ಛೇದಿತ ಪತ್ನಿಯ ಪ್ರೀತಿ ಮತ್ತು ಕಾಳಜಿಯೊಂದಿಗೆ ಹಂತಹಂತವಾಗಿ ಚೇತರಿಸಿಕೊಳ್ಳುತ್ತಾನೆ. ಅವನು ಹಂತಹಂತವಾಗಿ 1980ರ ನಡುವೆ. ಶೈಕ್ಷಣಿಕ ಕೆಲಸಕ್ಕೆ ಮರುಳಿದ್ದು ಎಕನಾಮಿಕ್ ಸೈನ್ಸಸ್ ಮಹಾಪ್ರಬಂಧಕ್ಕೆ ನೊಬೆಲ್ ಮೆಮೊರಿಯಲ್ ಬಹುಮಾನ 1994 ರಲ್ಲಿ ಪಡೆದುಕೊಳ್ಳುತ್ತಾನೆ. 1950ರಲ್ಲಿ ಇದು ಅವನಿಗೆ ಪಿಎಚ್.ಡಿ ಪದವಿಯನ್ನು ಗಳಿಸಿಕೊಡುತ್ತದೆ. ಇವರು ಗಣಿತಜ್ಞ ಮತ್ತು ಅರ್ಥಶಾಸ್ತ್ರಜ್ಞ ಎರಡೂ ಆಗಿರುತ್ತಾರೆ. ಆತ ಬೀಜಗಣಿತ, ರೇಖಾಗಣಿತ ಕ್ಷೇತ್ರದಲ್ಲಿ ವ್ಯಾಪಕ ಕಾರ್ಯವನ್ನು ಮಾಡಿದ್ದಾನೆ. ಈತ ಹಲವಾರು ಥಿಯೋರಿಮ್‌ಗಳನ್ನು (ಪ್ರಬಂಧಗಳನ್ನು) ಇವನು ಪ್ರಕಟಿಸಿದ್ದು, 2015 ರಲ್ಲಿ ಪ್ರತಿಷ್ಠಿತ ಅಬೆಲ್ ಬಹುಮಾನ ಪುರಸ್ಕೃತರಾಗಿದ್ದಾನೆ.

25. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ ಅಧೀನ ನ್ಯಾಯಾಲಯವು, ಸಂಪೂರ್ಣವಾಗಿ ವಾಸಿಮಾಡಲಾಗದ ಪ್ಯಾರಾನಾಯ್ಡ್ ಶಿಜೊಫ್ರೇನಿಯಾದಿಂದ

ಬಳಲುತ್ತಿರುವಳೆಂದು ಗುರುತಿಸುವಷ್ಟು ಅಸೂಕ್ಷ್ಮವಾಗಿದೆ. ಕೌಟುಂಬಿಕ ನ್ಯಾಯಾಲಯವು, ಇದೇ ವೈದ್ಯಕೀಯ ಸಾಕ್ಷ್ಯದ ಮೇಲೆ ಇದೇ ಸಮಯದಲ್ಲಿ ನಿಯತ ವೈದ್ಯಕೀಯ ಔಷಧ ಮತ್ತು ಕುಟುಂಬದ ಬೆಂಬಲದೊಂದಿಗೆ ಅಂಥ ರೋಗಿಗಳು ಸಾಮಾನ್ಯ ಜೀವನವನ್ನು ನಡೆಸಬಹುದೆನ್ನುವ ಇಂಗಿತವನ್ನು ಸೂಚಿಸಬಹುದಾಗಿತ್ತು. ಸಮಾಜದ ಇತರ ಯಾವುದೇ ಸಾಮಾನ್ಯ ವ್ಯಕ್ತಿಗಳಂತೆ ನಿಯತ ವೈದ್ಯಕೀಯ ಔಷಧದ ಬೆಂಬಲದಿಂದ ಜೀವನ ನಡೆಸುವಂಥ ನಮ್ಮ ಸಮಾಜದಲ್ಲಿ ಅಂಥ ಕಾಯಿಲೆಯ ಹಲವಾರು ಸಂತ್ರಸ್ತರ ಜೀವಂತ ಉದಾಹರಣೆಗಳಿವೆ. ಪ್ರಸ್ತುತ ಈ ನ್ಯಾಯಾಲಯದ ಮುಂದಿರುವ ಅಪೀಲುದಾರ / ಪತ್ನಿಯು ನ್ಯಾಯಾಲಯ ಸಭಾಂಗಣದಲ್ಲಿ ಹಾಜರಾಗಿರುವ ಯಾರೇ ಇತರ ವ್ಯಕ್ತಿಯಂತೆ ಕಾಣುತ್ತಿದ್ದು, ಇವಳು ಎಂಸಿಎ ಪದವಿಯನ್ನು ಡಿಸ್ಟಿಂಕ್ಷನ್‌ನಲ್ಲಿ 1ನೇ ದರ್ಜೆಯಲ್ಲಿ ಪಡೆದುಕೊಂಡಿದ್ದು, ನ್ಯಾಯಸ್ಥಾನದಲ್ಲಿ ಇದನ್ನು ಸಲ್ಲಿಸಲಾಗಿದ್ದು, ಶಿಜೋಫ್ರೇನಿಕ್ ರೋಗಲಕ್ಷಣಗಳು ಪುನರಾವರ್ತಿಸುವ ಯಾವುದೇ ಗ್ರಹಿಕೆಗಳಿದ್ದರೂ ಕೂಡ ಅವಳ ವಿವಾಹಕ್ಕು ಮೊದಲು ಉದ್ಯೋಗದಲ್ಲಿದ್ದು, ಉತ್ತರವು ಔಷಧವನ್ನು ಹೊಸರೂಪದಲ್ಲಿ ಕೊಡುವುದರಲ್ಲಿದೆ, ಆದರೆ ಅವಳ ವೈವಾಹಿಕ / ಭಾವನಾತ್ಮಕ ಜೀವನವನ್ನೇ ಚಿವುಟಿ ಹಾಕುವುದರಲಿಲ್ಲ.

26. ಸಿಂಧುವಾದ ವಿವಾಹದ ಷರತ್ತುಗಳನ್ನು ವಿಧಿಸಿರುವ ಅಧಿನಿಯಮದ 5ನೇ ಪ್ರಕರಣವನ್ನು ಉಲ್ಲಂಘಿಸಿದ ಒಂದು ಪ್ರಕರಣವನ್ನು ತೆಗೆದುಕೊಳ್ಳುವಲ್ಲಿ ಕೌಟುಂಬಿಕ ನ್ಯಾಯಾಲಯವು ಮಾಡಿದ ಪ್ರಯತ್ನಕ್ಕೆ ನಾವು ಚಕಿತಗೊಂಡಿದ್ದೇವೆ. ಪತಿಯು ಯಾವುದೇ ವಾದ ಅಥವಾ ಸಾಕ್ಷ್ಯವನ್ನು ಮಾಡಿಸದಿದ್ದರೂ, ಪತ್ನಿಯು ವಿವಾಹಕ್ಕಾಗಲಿ ಅಥವಾ ಮಕ್ಕಳಿಗೆ ಜನ್ಮಕೊಡುವುದಕ್ಕಾಗಲಿ ಸೂಕ್ತಳಾಗಿಲ್ಲವೆಂದು ಅಧೀನ ನ್ಯಾಯಾಲಯವು ಗ್ರಹಿಸಿದೆ. ಕೌಟುಂಬಿಕ ನ್ಯಾಯಾಲಯವು, ಸಮರ್ಥಿಸಲಾಗದ ನಿರ್ಲಕ್ಷ್ಯ ತೋರಿದ್ದು, ಇದು ಹಾಗೆ ದಾಖಲಿಸಲಾದ ವಿಪರ್ಯಸ್ತ ನಿರ್ಣಯವಾಗಿತ್ತೆಂಬುದು ನಮಗೆ ನಿಶ್ಚಿತವಾಗಿದೆ. ಬಾಧಿತ ಪತಿಗೆ ಪರಿಹಾರವನ್ನು ನೀಡುವ ಉತ್ಸಾಹದ ಭರದಲ್ಲಿ, ಪತ್ನಿಯನ್ನು ಶಿಕ್ಷೆಗೆ ಗುರಿಪಡಿಸಿದೆ. ಕೌಟುಂಬಿಕ ನ್ಯಾಯಾಲಯವು ತನ್ನ ಔಚಿತ್ಯ ಮತ್ತು ಅಧಿಕಾರವ್ಯಾಪ್ತಿಯನ್ನು ಮೀರಿದೆ. ನಮ್ಮ ಮುಂದಿರುವ ಯುವತಿಯ ಭಾವನೆಗಳನ್ನು ಅರಿತುಕೊಳ್ಳಬಹುದಾದ ಕೌಟುಂಬಿಕ ನ್ಯಾಯಾಲಯದ ನಿರ್ಣಯವು ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡುತ್ತದೆಯೆಂಬುದು ನಮ್ಮ ಕಳವಳವಾಗಿದೆ. ಅವಳ ಜೀವನದಲ್ಲಿ ಇನ್ನೂ ತುಂಬಾ ದೂರ ಸಾಗಬೇಕಿದೆ.

ಅವಳ ವಿರುದ್ಧ ತೆಗೆದುಕೊಂಡ ನಿರ್ಣಯವು, ಈಗಾಗಲೇ ಜೀವನದೊಂದಿಗೆ ಹೋರಾಟದಲ್ಲಿರುವ ಅವಳ ಮನಸ್ಸಿನ ಮೇಲೆ ಇದು ದಹನ ಪರಿಣಾಮವನ್ನುಂಟುಮಾಡುವ ಸಂಭವವಿರುತ್ತದೆ. ಅವರ ಮುಂದಿರುವ ಪ್ರತಿಯೊಂದು ಪ್ರಕರಣಕ್ಕೆ ಹೆಚ್ಚು ಜೀವಂತಿಕೆ ಅಥವಾ ಜಾಗರೂಕವಾಗಿರುವ ಕೌಟುಂಬಿಕ ವಿಷಯಗಳೊಂದಿಗೆ ವ್ಯವಹರಿಸುವ ನ್ಯಾಯಾಲಯಗಳನ್ನು ಎಚ್ಚರಿಸಲು ನಾವು ವಿಷಯಗಳ ಸೂಕ್ತತೆಯನ್ನು ನಾವು ಭಾವಿಸಿಕೊಳ್ಳಬೇಕು ಪ್ರತಿಯೊಂದು ಪ್ರಕರಣ ತನ್ನದೇ ಆದ ಸಂಗತಿಗಳು ಮತ್ತು ಸನ್ನಿವೇಶಗಳಿಂದ ವಿಭಿನ್ನವಾಗಿರುತ್ತವೆ. ಪ್ರಕರಣಕ್ಕೆ ಪರಿಹಾರವನ್ನು ನೀಡುವುದಕ್ಕೆ ಅದು ಯಾವ ಕಾನೂನಿನ ಉಪಬಂಧದ ಅಡಿಯಲ್ಲಿರುತ್ತದೆ? ಎಂಬುದನ್ನು ನೋಡಲು ನ್ಯಾಯಾಲಯ ಪ್ರಯತ್ನಿಸಬೇಕು, ನ್ಯಾಯಾಧೀಶರು, ಪೂರ್ವನಿರ್ಧರಿತ ಮನಸ್ಥಿತಿಯಲ್ಲಿ ನ್ಯಾಯಸ್ಥಾನಕ್ಕೆ ಬಂದರೆ ಅವರು ಶೂನ್ಯಗೊಂಡದ್ದರಿಂದಲೂ ನಿರ್ಣಯದ ಕಾರಣಗಳನ್ನು ಉಲ್ಲೇಖಿಸುತ್ತಾರೆ, ಪ್ರಸ್ತುತ ಮೊಕದ್ದಮೆಯಲ್ಲಾದಂತೆ ಕಾನೂನಿನ ಸಾಕ್ಷ್ಯವು ಅವರ ಮುಂದೆ ದಾಖಲೆಯ ಮೇಲೆ ಶೂನ್ಯಗೊಳ್ಳುತ್ತದೆ.

27. ಶಿಜೊಫ್ರೇನಿಯಾ ವಾಸಿಮಾಡಲಾಗದ ನಮೂನೆಯ ಅಸ್ವಸ್ಥತೆಯಿಂದ ಬಳಲುತ್ತಿರುವುದರ ಆಧಾರದ ಮೇಲೆ ಅಧಿನಿಯಮದ 13(1)(iii) ನೇ ಪ್ರಕರಣದ ಮೇರೆಗೆ ಮೊಕದ್ದಮೆಯನ್ನು ರೂಪಿಸಲು ಪತಿಯು ವಿಫಲನಾಗಿರುವನೆಂದು ಅಭಿಪ್ರಾಯಪಟ್ಟಿರುವುದರಿಂದ ಅವಳೊಟ್ಟಿಗೆ ಸಹಜೀವನ ನಡೆಸಲು ಅವನು ಯುಕ್ತವಾಗಿ ಬಯಸಲು ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗಿನ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿಹಾಕುವುದು ಅಗತ್ಯವಾಗಿರುತ್ತದೆ.

ಈ ಅಪೀಲನ್ನು ಪುರಸ್ಕರಿಸಲಾಗಿದೆ. ಬಳ್ಳಾರಿಯ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ವೈವಾಹಿಕ ಪ್ರಕರಣ ಸಂ. 221/2013 ರಲ್ಲಿ ಹೊರಡಿಸಲಾದ ದಿನಾಂಕ 30ನೇ ಅಕ್ಟೋಬರ್ 2014ರ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿಹಾಕಲಾಗಿದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಆದೇಶವಿರುವುದಿಲ್ಲ.